ಸೃಷ್ಟಿಯಾಗಿರುವುದರಿಂದ ಪುನರ್ ವಿಮರ್ಶೆ ಮಾಡಿಕೊಂಡು ಆ ದಿನಾಂಕವನ್ನು September ಕೊನೆಗೆ ಇಡುವುದು ಆಗಿದ್ದರೆ, 2 ತಿಂಗಳು ಎಂದು ಮಾನ್ಯ ಶ್ರೀರಾಮರೆಡ್ಡಿಯವರು ಕೂಡ ಹೇಳಿದರು. September ಕೊನೆಯಲ್ಲಿ ಇಟ್ಟುಕೊಳ್ಳಬೇಕು ಏಕೆಂದರೆ ಮಧ್ಯದಲ್ಲಿ ಆದರೆ ಗಣೇಶ ಚತುರ್ಥಿ ಬರುತ್ತದೆ. ಗಣೇಶ ಚತುರ್ಥಿ ಕಾಲದಲ್ಲಿ ಅನೇಕ ಸೂಕ್ಷ್ಮ ಪ್ರದೇಶಗಳನ್ನು ನಾವು ಈಗಾಗಲೇ ಘೋಷಣೆ ಮಾಡಿದ್ದೇವೆ ಮತ್ತು ಗುರುತಿಸಿದ್ದೇವೆ. ಅಲ್ಲಿ ಕೋಮು ಗಲಭೆಗಳು ಆಗುವಂಥ ಎಲ್ಲಾ ಸಂಭವಗಳು ಇರುವಂಥ ಹಿನ್ನೆಲೆಯಲ್ಲಿ September ಕೊನೆಯಲ್ಲಿ ಆಗುವುದಾಗಿದ್ದರೆ ಅದು ಒಂದು ಸೂಕ್ತವಾದ ಕಾಲ. ಕೇವಲ ಒಂದು ತಿಂಗಳು ಎರಡು ತಿಂಗಳು ಮುಂದೆ ಹಾಕುವುದರ ಮೂಲಕವಾಗಿ ನ್ಯಾಯಾಲಯಗಳು ಕೂಡ ವಸ್ತುಸ್ಥಿತಿಯನ್ನು ಸರಿಯಾಗಿ ಅವರಿಗೆ ವಿವರಿಸಿದರೆ ಅವರು ಕೂಡ ಒಪ್ಪುತ್ತಾರೆ. ಚುನಾವಣಾ ಆಯುಕ್ತರಿಗೆ ಈ ಅಧಿಕಾರವನ್ನು ನಾವು ಕೊಟ್ಟಿದ್ದೆವೆ. ಆ ಅಧಿಕಾರವನ್ನು ಬಳಸಿ ಅವರು ಮತ್ತೆ ಪುನರ್ ವಿಮರ್ಶೆ ಮಾಡಿ ನಿರ್ಧರವನ್ನು ಮಾಡಬೇಕು. ಜನ ಪ್ರತಿನಧಿಗಳ ಅಭಿಪ್ರಾಯದ ಮುಂದೆ ಬರೀ ತಾಂತ್ರಿಕವಾಗಿರತಕ್ಕಂಥ ನಿಯಮಾವಳಿಗಳನ್ನು ಉದಾರಿಸುವಂಥದ್ದು ಅಷ್ಟು ಆರೋಗ್ಯಕರವಾದ ಬೆಳವಣಿಗೆಯಲ್ಲ ಎನ್ನುವಂಥ ಮಾತನ್ನು ಹೇಳಿ ಈ ಸಂದರ್ಭದಲ್ಲಿ ಚುನಾವಣಾ ಆಯುಕ್ತರಿಗೆ ಸಹಕಾರ ಕೊಡಲಿಕ್ಕೆ ಸರ್ಕಾರ ಸಿದ್ಧವಿದೆ. ಆದರೆ ಅಷ್ಟರ ಮಟ್ಟಿಗೆ ಚುನಾವಣಾ ಆಯುಕ್ತರು ಇಡೀ ಸದನದ ಅಭಿಪ್ರಾಯವನ್ನು ಪಕ್ಷಾತೀತವಾಗಿ ಮತ್ತು ಇಲ್ಲಿರುವಂಥ ವಸ್ತುಸ್ಥಿತಿಯನ್ನು ಬೇರೆ ಬೇರೆ ಪಕ್ಷಗಳು ಅಲ್ಲದೇ ಸಮಾಜದಲ್ಲಿರತಕ್ಕಂಥ ಪತ್ರಿಕೆಗಳು ಮತ್ತು ಸಂಘ ಸಂಸ್ಥೆಗಳು ಕೊಟ್ಟಿರತಕ್ಕಂಥ ಮನವಿಯ ಹಿನ್ನೆಲೆಯಲ್ಲಿ ಅದನ್ನು ಪುನರ್ ವಿಮರ್ಶೆ ಮಾಡಬೇಕೆಂದು ಹೇಳಿ ನಾನು ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ. ಇದನ್ನು ನಾವು ಅವರ ಗಮನಕ್ಕೆ ಕೂಡ ತರುತ್ತೇವೆ.

(2) ವಿಷಯ: ಮಲೆನಾಡಿನ ಭಾಗದಲ್ಲಿ ಅತಿವೃಷ್ಟಿ ಬಗ್ಗೆ.

ಶ್ರೀ ಕುಮಾರಸ್ವಾಮಿ ಎಂ.ಪಿ (ಮೂಡಗೆರೆ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಲೆನಾಡಿನ ಭಾಗದಲ್ಲಿ ಅತಿಯಾದ ಮಳೆಯಿಂದ ಎರಡನೇ

ಬಾರಿಗೆ ಈ ಅತಿವೃಷ್ಟಿ ಪ್ರಾರಂಭವಾಗಿದೆ. ಸರ್ಕಾರ ಕಳೆದ ಬಾರಿ ಪರಿಹಾರ ಕೊಡುತ್ತೇವೆಂದು ಹೇಳಿ ಕೊಟ್ಟರೂ ಕೂಡ ಅದು ಸಾಕಾಗಿಲ್ಲ. ಈಗ ರಸ್ತೆ ಯಾವುದು ಅಥವಾ ಗದ್ದೆ ಯಾವುದು, ಬೆಳೆ ಯಾವುದು ಎಂದು ಗುರುತಿಸುವುದು ಬಹಳ ಕಷ್ಟವಾಗಿದೆ. ಈ ಸಂದರ್ಭದಲ್ಲಿ ಸರ್ಕಾರ ಮಲೆನಾಡಿನ ಭಾಗದಲ್ಲಿ ಎಷ್ಟು ಅತಿವೃಷ್ಟಿಯ ಸ್ಥಳಗಳನ್ನು ಸಮೀಕ್ಷೆ ಮಾಡಬೇಕು. ಮೊನ್ನೆ ಕೇಂದ್ರ ತಂಡ ಅಲ್ಲಿಗೆ ಹೋಗಿತ್ತು. ಆದರೆ ಹೋಗಬೇಕಾದ ಸ್ಥಳಕ್ಕೆ ಹೋಗಲಿಲ್ಲ. ಅಲ್ಲಿ ಸರ್ಕಾರದ ಪ್ರಕಾರ ಅಂಕಿಅಂಶಗಳನ್ನು ಕಲೆಕ್ಟ್ ಮಾಡುವುದಕ್ಕಾಗಲಿಲ್ಲ. ಈಗ ಅತಿಯಾದ ಮಳೆಯಾಗಿರುವುದರಿಂದ ಸರ್ಕಾರ ಪುನಃ ನಮ್ಮ ಮಲೆನಾಡಿನ ಅತಿವೃಷ್ಟಿ ಭಾಗದ ಸಂಕಷ್ಟಕ್ಕೆ ಧಾವಿಸಬೇಕು. ಅವರ ಮನೆಗಳು ಹೋಗಿದೆ. ರಸ್ತೆಗಳು ಕೊಚ್ಚಿ ಹೋಗಿವೆ. ಈಗಾಗಲೇ ಕೊಟ್ಟಿರತಕ್ಕಂಥ ಪರಿಹಾರ ಏನು ಸಾಲದೇ ಹೋಗಿರುವುದರಿಂದ ದಯಮಾಡಿ ಸರ್ಕಾರ ಈಗ ನಮ್ಮ ಮಲೆನಾಡಿನ ಭಾಗದ ಒಂದು ಸಂಕಷ್ಟಕ್ಕೆ ಧಾವಿಸಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿಯನ್ನು ಮಾಡುತ್ತೇನೆ.

ಶ್ರೀ ಕುಮಾರ್ ಬಂಗಾರಪ್ಪ (ಸೊರಬ): ಮಾನ್ಯ ಅಧ್ಯಕ್ಷರೆ, ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಮಳೆಯ ಆರ್ಭಟ ಮತ್ತು ಮಳೆಯ ಹಾನ ಅತಿ ಯಥೇಚ್ಚವಾಗಿ ಆಗತಕ್ಕಂತ ದಿನಗಳನ್ನು ನೋಡಿದ್ದೇವೆ. ಮಾನ್ಯ ಕುಮಾರಸ್ವಾಮಿಯವರು ಕೆಲವು ವಿಷಯಗಳನ್ನು ಈಗ ಅವರು ಪ್ರಸ್ತಾಪ ಮಾಡಿದರು. ಈಗ ಯಾವ ರೀತಿಯಾಗಿ ಇದೆ ಎಂದರೆ, ಯಾವ ಕಾರಣಕ್ಕೂ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವುದಕ್ಕೆ ಆಗದೇ ಇರುವಂಥ ಪರಿಸ್ಥಿತಿ ಇದೆ. ಎಲ್ಲಾ ಊರುಗಳು ಕೂಡ ದ್ವೀಪವಾಗಿ, ಎಲ್ಲಾ ಬೆಳೆಗಳು ಹಾಳಾಗಿವೆ ಎಂದು ಮೊನ್ನೆ ಒಂದು ಸಮೀಕ್ಷೆಯನ್ನು ಮಾಡಿದೆವು. ಅಲ್ಲಿ ಅಲ್ಪ ಸ್ವಲ್ಪ ಬೆಳೆ ಬಂತು ಎಂದ ತಕ್ಷಣ ಇಡೀ ತಾಲ್ಲೂಕು ಮತ್ತು ಜಿಲ್ಲೆ ಜಲಾವೃತವಾಗಿಬಿಟ್ಟು ಇವತ್ತು ಸಂಪೂರ್ಣವಾಗಿ ಬೆಳೆ ಹಾನಿಯಾಗಿ ಹೋಗಿದೆ. ಈಗ ಯಾವ ರಸ್ತೆಯಲ್ಲಿ ಕೂಡ ನಮಗೆ ಹೋಗುವುದಕ್ಕಾಗುತ್ತಿಲ್ಲ. ನ್ಯಾಷನಲ್ ಹೈವೇಯಿಂದ, ಸ್ಟೇಟ್ ಹೈವೇಯಿಂದ ಹಿಡಿದು ನಮ್ಮ ಹಳ್ಳಿಯ ರಸ್ತೆಗಳಿಂದ ಹಿಡಿದು ಎಲ್ಲಾ ರಸ್ತೆಗಳ ಮೇಲೆ ಇವತ್ತು ಎರಡು ಅಡಿಯಿಂದ ಮೂರು ಅಡಿಯವರೆಗೆ ಹೊಳೆಯಿಂದ ನೀರು ಹರಿಯುತ್ತಿದೆ. ಒಂದು

ಸಂದರ್ಭದಲ್ಲಿ ಬರಗಾಲ ಎಂದು ಹೇಳಿ ಆಗ ಒದ್ದಾಡಿದ್ದೆವು. ಈಗ ಅತಿವೃಷ್ಟಿ ಎಂದು ಹೇಳಿಬಿಟ್ಟು ಈಗ ಒದ್ದಾಡುತ್ತಿದ್ದೇವೆ. ಈಗ ನಮಗೆ ಯಾವ್ಯಾವ ಸಂದರ್ಭದಲ್ಲಿಯೂ ಕೂಡ ಪರಿಸ್ಥಿತಿ ನಮಗೆ ಅನುಕೂಲವಾಗದಿರುವ ರೀತಿಯಲ್ಲಿ ಇದ್ದಾವೆ. ಇವತ್ತು ಇಷ್ಟು ಮನೆಗಳು ಬೀಳುತ್ತಿವೆ ಎಂದರೆ, ಈಗ ಅಲ್ಲಿ ಅಲ್ಪ ಸ್ವಲ್ಪ ಹಸಿಯಾಗಿದೆ. ಮಳೆ ಇನ್ನೊಂದೆರಡು ದಿವಸ Meteorological Department ಪ್ರಕಾರ ಅತಿಯಾಗಿರತಕ್ಕಂಥ ಮಳೆ ಇದೆ ಎಂದು ಹೇಳಿ ಘೋಷಣೆ ಮಾಡಿದ್ದಾರೆ. ಹಾಗಾಗಿ ಈಗ ಮಳೆ ಬರುವುದಕ್ಕೆ ಶುರು ಆಯಿತು ಎಂದರೆ, ಮನೆಗಳು ಅತಿಯಾಗಿ ಬಿದ್ದುಹೋಗುವ ಪರಿಸ್ಥಿತಿಗಳು ಇವೆ. ಈ ಸಂದರ್ಭದಲ್ಲಿ ವಿದ್ಯುತ್ ನಮಗೆ ಸಂಪೂರ್ಣವಾಗಿ ಕೈಕೊಟ್ಟು ಬಿಟ್ಟಿದೆ. ನಮಗೆ ಎಲ್ಲಿಯೂ ಕೂಡ ವಿದ್ಯುತ್ ಇಲ್ಲದಿರುವಂಥ ಪರಿಸ್ಥಿತಿ ಇದೆ. ಆಮೇಲೆ ಅಡಿಕೆ ಬೆಳೆಗೆ ಕೊಳೆ ರೋಗ ಬಂದು ಬಿಟ್ಟು ಪೂರ್ತಿ ಎಲ್ಲಾ ಹೋಗಿದೆ. ಹೋದ ಸಲ ನಮಗೆ 10–15 ದಿವಸ ಕಾಲ ಎಲ್ಲಾ ಬೆಳೆಗಳು ನೀರಿನಲ್ಲಿ ನಿಂತಿದ್ದವು. ಮತ್ತೆ ಈಗ ಸುಮಾರು ಒಂದು ವಾರದಿಂದ ಮಳೆಯಿಂದ ಬೆಳೆಗಳು ನೀರಿನಲ್ಲಿ ನಿಂತಿವೆ. ಬರೀ ನಿನ್ನೆ ಒಂದು ದಿವಸಕ್ಕೆ 177 ಮಿ. ಮೀಟರ್ ಮಳೆ ಧಾರಾಕಾರವಾಗಿ ಸುರಿದಿದೆ. ಬರೀ ನೀರು ಮೇಲಿನಿಂದ ಸುರಿಯುತ್ತಿರುವುದರಿಂದ ಎಲ್ಲೂ ಪರಿಸ್ಥಿತಿಗಳು ನಮಗೆ ಅನುಕೂಲವಾಗಿಲ್ಲ. ಹಾಗಾಗಿ ಮುಂಚೆ 5 ಲಕ್ಷ ರೂ. ಗಳ ಪರಿಹಾರ ಕೊಟ್ಟಿರತಕ್ಕಂಥದ್ದರ ಬಗ್ಗೆ ಘೋಷಣೆಯನ್ನು ಮಾಡಿದರು. ಮಳೆ ಹಾನಿ ಮತ್ತು ಬೆಳೆ ಹಾನಿಗೆ ಎಂದು ಮಾಡಿದ್ದನ್ನು ಬಿಟ್ಟರೆ ಇಲ್ಲಿಯವರೆಗೂ ನಮಗೆ ಹಣಕಾಸು ಯಾವುದೂ ಕೂಡ ತಲುಪಿಲ್ಲ. ಆಮೇಲೆ ಮರಳು ಚೀಲ ತೆಗೆದುಕೊಂಡು ಹೋಗುವುದಕ್ಕೆ ನಮಗೆ ಅವಕಾಶ ಮಾಡಿಕೊಡಬೇಕು. ಏಕೆಂದರೆ P.W.D. ಯ ಎಲ್ಲಾ ರೋಡ್‌ಗಳು ಕೂಡ ಸಿಂಕ್ ಆಗಿ ಹೋಗಿವೆ. Telephone ವಯರ್ಸ್‌ನ್ನು ಹಾಕುವುದಕ್ಕೆ ಮಾಡಿರತಕ್ಕಂಥ OFC ಲೈನ್ಸ್‌ನ್ನು ಹಾಕಿರತಕ್ಕಂಥದ್ದಕ್ಕೆ, ನಮಗೆ ಕೆರೆ ಏರಿಗಳು ಮತ್ತು ರಸ್ತೆಗಳ ಮೇಲೆ ನಾವು ಹಾದು ಹೋಗುತ್ತಿದ್ದೆವು. ಈಗ ಅವೆಲ್ಲಾ OFC ಲೈನ್‌ಗಳು ಕುಸಿದುಬಿಟ್ಟು ನಾವು revetment ಮಾಡಿರತಕ್ಕಂಥದ್ದು ಕೂಡ ಸಂಪೂರ್ಣವಾಗಿ collapse ಆಗಿ ಹೋಗುತ್ತಿವೆ. ಹೀಗಾಗಿ ಈ ತರಹ ಪರಿಸ್ಥಿತಿ ಅಲ್ಲಿ ಇರುವುದರಿಂದ ನಮಗೆ ಬೆಳೆ ಹಾನಿಗೆ ಮತ್ತು ನಷ್ಟವಾಗಿರತಕ್ಕಂಥ ಎಲ್ಲಾ ರಸ್ತೆಗಳಿಗೆ ಒಂದು

ಕೋಟಿ ರೂ.ಗಳು ಎರಡು ಕೋಟಿ ರೂ.ಗಳಲ್ಲಿ ನಾವು ಕೆಲಸವನ್ನು ಮಾಡುತ್ತಿದ್ದೇವೆ. ತತ್‌ಕ್ಷಣ ಸರ್ಕಾರ ಇದಕ್ಕೆ ಸ್ಪಂದಿಸಬೇಕಂದು ನಾನು ತಮ್ಮ ಮೂಲಕ ಮನವಿಯನ್ನು ಮಾಡುತ್ತಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಇದೊಂದು ಅಸಮಾನ್ಯವಾಗಿರುವಂತಹ ಪರಿಸ್ಥಿತಿಯಾಗಿದೆ. ನಾವು ಎಲ್ಲಾ ಮಲೆನಾಡಿನ ಶಾಸಕರು ಹೆಚ್ಚು ಕಡಿಮೆ ತಮ್ಮಲ್ಲಿ ಈ ಬಗ್ಗೆ ಅರಿಕೆ ಮಾಡಿಕೊಂಡಿದ್ದೇವೆ. ಸರ್ಕಾರಕ್ಕೆ ಈ ಸದನದ ಮೂಲಕ ತಿಳುವಳಿಕೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ ಅತಿವೃಷ್ಟಿ ಎಂದರೆ ನಾವು ಬಹಳ ವರ್ಷಗಳಿಂದ ಮಳೆಯನ್ನು ನೋಡಿಕೊಂಡು ಬಂದಿದ್ದೇವೆ. ಮಲೆನಾಡಿಗೆ ಮಳೆ ಬರುವುದು ದೊಡ್ಡದೇನು ಅಲ್ಲ. ಕಳೆದ ಒಂದು ತಿಂಗಳಿಂದ ಸುರಿಯುತ್ತಿರುವ ಮಳೆ, ಮೊನ್ನೆ 3 ದಿನದಿಂದ ಹೆಚ್ಚಾಗಿ ಸುರಿಯುತ್ತಿದೆ. ತಮಗೆ ಒಂದು ಉದಾಹರಣೆಯನ್ನು ಕೊಟ್ಟು ಇದರ ಅಗಾಧತೆ ಏನು ಎಂಬುದು ತಮಗೆ ಗೊತ್ತಾಗುತ್ತದೆ. 6 ದಿನ ಒಂದೇ ಸಮನೆ ಮಳೆ ಸುರಿದರೆ 1 ಅಡಿ ನೀರು ಲಿಂಗನಮಕ್ಕಿ ಜಲಾಶಯಕ್ಕೆ ಬರುತ್ತಿತ್ತು. ಆದರೆ ಕೇವಲ 1 ದಿನಕ್ಕೆ 6 ಅಡಿ ನೀರು ಬಂದಿದೆ. ಬಹುಶಃ ಈಗ ಲಿಂಗನಮಕ್ಕಿ ಜಲಾಶಯ ತುಂಬುತ್ತಾ ಬಂದಿದೆ. ಇನ್ನು 3 ಅಡಿ ನೀರು ತುಂಬಿದರೆ flood level ಮುಗಿಯುತ್ತದೆ. ಇವತ್ತು ರಾತ್ರಿ ಹೊತ್ತಿಗೆ ಅದು ಕೂಡ ತುಂಬುತ್ತದೆ. ನನ್ನ ವಿನಂತಿ ಏನೆಂದರೆ, ಈಗಾಗಲೇ ಮಾನ್ಯ ಸದಸ್ಯರುಗಳಾದ ಶ್ರೀ ಕುಮಾರಸ್ವಾಮಿ ಹಾಗೂ ಶ್ರೀ ಕುಮಾರಬಂಗಾರಪ್ಪನವರು ಹೇಳಿದ್ದಾರೆ. ನಾನು ಅವರು ಹೇಳಿರುವ ಬಗ್ಗೆ ಚರ್ವಿತ ಚರ್ವಣ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಕಡೆ ಸಂಪೂರ್ಣವಾಗಿ ದ್ವೀಪವಾಗಿದೆ. ಎಲ್ಲಾ ಸಂಪರ್ಕದಿಂದ ವಂಚಿತರಾಗಿದ್ದೇವೆ. ಶಿವಮೊಗ್ಗದಿಂದ ಉಡುಪಿಗೆ ಹೋಗುವಂತಹ ಆಗುಂಬೆಗೆ ಹೋಗುವಂತಹ ಎಲ್ಲಾ ರಸ್ತೆಗಳ ಮೇಲೂ, ತೀರ್ಥಹಳ್ಳಿಯ ರಸ್ತೆಯ ಸಂಪರ್ಕ ಕಟ್ ಆಗಿದೆ. ತುಂಗಾನದಿ ರಸ್ತೆಯ ಮೇಲೆ ನಿಂತಿದೆ. ಅದು ಅಲ್ಲದೆ ಶರಾವತಿ ಹಿನ್ನೀರಿನ ಪ್ರದೇಶದಲ್ಲಿರುವ ನನ್ನ ಹೊಸನಗರ ತಾಲ್ಲೂಕಿನ ನಗರದಿಂದ ಬಾಳೆ ಬರಿಗೆ ಹೋಗುವಂತಹ ಕೊಲ್ಲೂರು ರಸ್ತೆ ಎರಡು ಕಡೆಗಳಲ್ಲಿ ಸೇತುವೆಯೂ ಕಟ್ ಆಗಿದೆ. ಅಲ್ಲಿ ಬದಲಿ ವ್ಯವಸ್ಥೆಗಳು ಇಲ್ಲ. ಅಲ್ಲಿ ಅನಾರೋಗ್ಯ ಪೀಡಿತರಾದಂತಹ ಜನರು ಇದ್ದಾರೆ. ಅವರು

ಯಾವುದೋ ದೋಣಿಗಳ ಮೇಲೆ ಬರುತ್ತಿದ್ದಾರೆ. ನಾನು ನಿನ್ನೆಯ ದಿನ ಅವರುಗಳು ಬರುತ್ತಿರುವುದನ್ನು ನೋಡಿ ಹೆದರಿ ವಾಪಸ್ಸು ಬಂದಿದ್ದೇನೆ. ಅಲ್ಲಿ ನಿಲ್ಲುವುದಕ್ಕೆ ಸಾಧ್ಯವಾಗದೆ ನೋಡಿ ಹೆದರಿ ವಾಪಸ್ಸು ಬಂದಿದ್ದೇನೆ. ಇಂತಹ ಒಂದು ಭಯಾನಕವಾದ ಪರಿಸ್ಥಿತಿ ಅಲ್ಲಿ ಇದೆ. ಅಲ್ಲಿ ಮನೆಗಳು ಉರುಳಿ ಹೋಗಿವೆ. ಅಲ್ಲಿ ಜಿಲ್ಲಾಡಳಿತ ಅಸಹಾಯಕ ಪರಿಸ್ಥಿತಿಯಲ್ಲಿದೆ. ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅಲ್ಲಿ ನೀವು ದಯಮಾಡಿ ಮಿಲಿಟರಿಯನ್ನು ಕರೆಸಬೇಕು, ಶಿವಮೊಗ್ಗ ಜಿಲ್ಲೆ ನಾರ್ತ್ ಕೆನರಾ, ಚಿಕ್ಕಮಗಳೂರು ಜಿಲ್ಲೆ ಈ ಒಂದು ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ ಅಲ್ಲಿ ಜನರನ್ನು ತತ್‌ಕ್ಷಣದಿಂದ ರಕ್ಷಣೆ ಮಾಡುವ ಬಗ್ಗೆ ಮಿಲಿಟರಿಯವರಿಗೆ ಕೊಡಬೇಕು. ಅಲ್ಲಿ ಗಂಜಿ ಕೇಂದ್ರಗಳನ್ನು ತೆರೆಸಬೇಕು. ಅಲ್ಲಿ ಮಳೆಯಿಂದ ಹಾನಿಯಾಗಿರುವ ಬಗ್ಗೆ ಇನ್ನು 2–3 ದಿವಸಗಳಲ್ಲಿ ಏನು ಗೊತ್ತಾಗುವುದಿಲ್ಲ. ಅಲ್ಲಿ 15 ದಿವಸಗಳಿಂದ ವಿದ್ಯುತ್ ಇರುವುದಿಲ್ಲ, ಅಲ್ಲಿ ಈ ಇಲಾಖೆಯವರು ಏನು ಮಾಡುತ್ತಿದ್ದಾರೆಂದು ಗೊತ್ತಿಲ್ಲ. ಏಕೆಂದರೆ ವಿದ್ಯುತ್ ಇಲಾಖೆಯ ಎಲ್ಲಾ ಕಂಟ್ರಾಕ್ಟ್‌ದಾರರು ನಮ್ಮ ಸ್ಥಳೀಯ ಕಂಟ್ರಾಕ್ಟರ್‌ಗಳು ಅಲ್ಲಿ strike ಮಾಡುತ್ತಿದ್ದಾರೆ. ಅವರಿಗೆ 3–4 ವರ್ಷಗಳಿಂದ ಬಿಲ್‌ನ್ನು ಕೊಟ್ಟಿರುವುದಿಲ್ಲ. ಅಲ್ಲಿ provident fund ನ್ನು ಕಟ್ ಮಾಡುತ್ತೇನೆಂದು ಹೇಳುತ್ತಿದ್ದಾರೆಂದು ಹೇಳಿ ಅವರುಗಳು ಸುಮ್ಮನಾಗಿದ್ದಾರೆ. ಮೆಸ್ಕಾಂ ಇಲಾಖೆಯ ಎಂ.ಡಿ. ಇಷ್ಟೊಂದು ಬೇಜವಾಬ್ದಾರಿಯ ವರ್ತನೆ ಇವರನ್ನು ತತ್‌ಕ್ಷಣ ಆ ಸ್ಥಾನದಿಂದ ತೆಗೆದುಹಾಕಬೇಕು. ಇಲ್ಲದೆ ಹೋದರೆ ಏನಾದರೂ ಒಂದು ರೀತಿಯಲ್ಲಿ ಮಾಡಬೇಕು. ಅವರು ಮಾಡುವಂತಹ ಅಪರಾಧಗಳಿಗೆ ಯಾರನ್ನೋ ಹೊಣೆಗಾರಿಕೆ ಮಾಡಿ ನಮ್ಮನ್ನು ಅಂದರೆ ಮಲೆನಾಡಿನ ಪ್ರದೇಶವನ್ನು ಕತ್ತಲಲ್ಲಿ ಇಟ್ಟಿದ್ದಾರೆ. ಶರಾವತಿ ಹಾಗೂ ಬೇರೆ ಬೇರೆ Hydel project ಗಳಿಂದ ಮುಳುಗಡೆಯಾಗಿ sacrifice ಮಾಡಿರುವಂತಹ ಜನರು ನಾವಾಗಿದ್ದೇವೆ. ನಾವು ತಿಂಗಳಾನುಗಟ್ಟಲೇ ಕತ್ತಲೆಯಲ್ಲಿ ಒದ್ದಾಡುತ್ತಿದ್ದೇವೆ. ಇವರಿಗೆ ಏನೂ ಇಲ್ಲ. ಇವರ ಮನೆಗಳಿಗೆ ಕರೆಂಟ್ ಬಂದ್ ಆದರೆ ಮಾತ್ರ ಇವರಿಗೆ ಗೊತ್ತಾಗುವುದು, ಇವರ ಹೆಂಡತಿ ಮಕ್ಕಳು ಸ್ನಾನಕ್ಕೆ ನೀರು ಇಲ್ಲ, ಅಡಿಗೆ ಮಾಡುವುದಕ್ಕಾಗುವುದಿಲ್ಲವೆಂದರೆ ಇವರಿಗೆ ನಿಶ್ಚಿತವಾಗಿ ಗೊತ್ತಾಗುವುದು. ಇಂತಹ ಅಸಹಾಯಕ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಈ ಬಗ್ಗೆ ಸರ್ಕಾರ

ತತ್‌ಕ್ಷಣ ನಮ್ಮ ನೆರವಿಗೆ ಬರಬೇಕು. ಜಿಲ್ಲಾಡಳಿತಕ್ಕೆ ಬೇರೆ ಬೇರೆ support ಬರಬೇಕು. ಅಲ್ಲಿಗೆ ಸಾಕಷ್ಟು ಹಣಕಾಸನ್ನು ಒದಗಿಸಬೇಕು. ಮೊನ್ನೆ ದಿನ ಕೇಂದ್ರ ತಂಡ ಅಲ್ಲಿಗೆ ಬಂದಿದೆ. ಅದನ್ನು ಎಲ್ಲೆಲ್ಲಿಗೋ ಕರೆದುಕೊಂಡು ಹೋಗಿ ತೋರಿಸಿದ್ದೀರಿ, ನಿಜವಾಗಲೂ ಕೂಡ ತಾವು ಅವರಿಗೆ ತೋರಿಸಬೇಕೆಂದರೆ ಕೇಂದ್ರ ತಂಡವನ್ನು ತಾವು ಈಗ ಕರೆಸಬೇಕು. ನಿಜವಾಗಿಯೂ ಪ್ರವಾಹ ಪರಿಸ್ಥಿತಿಯ ಬಗ್ಗೆ ಕೇಂದ್ರ ತಂಡಕ್ಕೆ ಈಗ ಮನವರಿಕೆ ಮಾಡುವುದಕ್ಕಾಗುತ್ತದೆ. ಹಳ್ಳ ಮತ್ತು ನದಿಗಳೆಲ್ಲಾ ಕೂಡಿಹೋಗಿವೆ. ಪೂರ್ಣವಾಗಿ ಗದ್ದೆಗಳು ನಾಶವಾಗಿವೆ. ಅಡಿಕೆ ಬೆಳೆಗಳು ಹಾಗೂ ಅಡಿಕೆ ಮರಗಳು ಹಾಳಾಗಿವೆ, ನಮಗೆ ಒಂದು ಬೆಳೆ ಹೋದರೆ ಚಿಂತೆಯಿಲ್ಲ. ಅಡಿಕೆ ಮರಗಳು ಸಾವಿರಾರು ಉರುಳಿ ಹೋಗಿವೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರವು ನಮಗೆ ಪರಿಹಾರವನ್ನು ಕಾನೂನು ಪ್ರಕಾರ ಕೊಡುವುದಕ್ಕೆ ಬರುವುದಿಲ್ಲ. ಸುನಾಮಿ ಮಾದರಿಯಲ್ಲಿ ನಮಗೆ ಮಲೆನಾಡು ಜನರಿಗೆ ಮತ್ತು ಅಡಿಕೆ ಬೆಳೆಗಾರರಿಗೆ ತಾವು ಪರಿಹಾರವನ್ನು ಕೊಡಬೇಕಾಗುತ್ತದೆ. ಸರ್ಕಾರ ಇದಕ್ಕೆ ಸಾಕಷ್ಟು ಹಣಕಾಸನ್ನು ವಿನಿಯೋಗ ಮಾಡಬೇಕು. ಮಂತ್ರಿಗಳು ಅಲ್ಲಿಗೆ ತತಕ್ಷಣ ಧಾವಿಸಬೇಕು, ಅಧಿಕಾರಿಗಳಿಗೆ ಒಂದು support ಮಾಡಿ ಬೆಳೆರೋಗ ಮತ್ತು ಮುಂತಾದಂತಹ ಎಲ್ಲಾ ವೈವಿದ್ಯಗಳಿಂದ ಮಲೆನಾಡಿನ ಜನರನ್ನು ರಕ್ಷಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿ ಕಟ್ಟಾಗಿರುವಂತಹ ರಸ್ತೆಗಳು ಮತ್ತು ಸೇತುವೆಗಳನ್ನು ತತಕ್ಷಣ ಬದಲಿ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಹಾಲಪ್ಪ (ಹೊಸನಗರ): ಮಾನ್ಯ ಅಧ್ಯಕ್ಷರೆ, ನಿನ್ನೆ ರಾತ್ರಿ ಎಷ್ಟರ ಮಟ್ಟಿಗೆ ಮಳೆಯಾಗಿದೆ ಎಂಬುದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಅರಗ ಜ್ಞಾನೇಂದ್ರರವರು ಹೇಳಿದ್ದಾರೆ. ಒಂದೇ ದಿನಕ್ಕೆ 6 ಅಡಿ ನೀರು ಲಿಂಗನಮಕ್ಕಿ ಡ್ಯಾಂಗೆ ಬಂದಿದೆ. ಅದು ಅಷ್ಟೇ ಅಲ್ಲ, ಆಗಸ್ಟ್ ತಿಂಗಳು 6ನೇ ತಾರೀಖು ತುಂಬಿರುವುದು ಆ ಡ್ಯಾಂ ಕಟ್ಟಿದ ಮೇಲೆ ಇದು ಮೊದಲನೇ ಸಾರಿ ಇರಬೇಕು. ನಿನ್ನೆ ರಾತ್ರಿ ಬಿದ್ದಂತಹ ಮಳೆಗೆ ನನ್ನ ಮತಕ್ಷೇತ್ರದಲ್ಲಿ ಒಂದು ಮನೆ ಬಿದ್ದು ಒಂದು ಮರ ಬಿದ್ದು 9ನೇ ತರಗತಿ ಓದುವಂತಹ ತಮ್ಮಡಿಹಳ್ಳಿಯಲ್ಲಿ ಒಂದು ಹೆಣ್ಣುಮಗು ತೀರಿಹೋಗಿದೆ. ಸರ್ಕಾರ ಅವರಿಗೆ ಪರಿಹಾರವನ್ನು ಕೊಡಬೇಕು. ಒಂದು ಲಕ್ಷ ಪರಿಹಾರ ಕೊಡುವುದು

ಯಾವುದೇ ಕಾರಣಕ್ಕೂ ಸಾಕಾಗುವುದಿಲ್ಲ. 9ನೇ ತರಗತಿ ಹೆಣ್ಣು ಮಗಳು ಎಂದರೆ ಅವಳು ಬಾಳಿ ಬದುಕಬೇಕಾದವಳು. ಅದೇ ರೀತಿಯಾಗಿ ಮನೆಗಳ ಮೇಲೆ ಜನರು ವಾಸವಾಗುವುದಕ್ಕೆ ನೀವು ಉತ್ತರ ಭಾರತಕ್ಕೆ ಹೋಗಬೇಕಾಗಿಲ್ಲ. ನನ್ನ ಮತಕ್ಷೇತ್ರ ವ್ಯಾಪ್ತಿಯಲ್ಲಿ ಹಾರಂಬಳ್ಳಿ ಎಂಬ ಊರಿನಿಂದ 2 ಮನೆಗಳ ಮೇಲೆ ಸುಮಾರು 18 ಜನರು ಇವತ್ತು ರಾತ್ರಿ ಬೆಳಗು ಕಳೆದಿದ್ದಾರೆ. ಈಗ ಅವರೆಲ್ಲರನ್ನು 10 ಗಂಟೆಯ ಮೇಲೆ ದೋಣಿಯನ್ನು ತೆಗೆದುಕೊಂಡು ಹೋಗಿ ಅವರನ್ನು ಹೊರಗಡೆ ಕರೆತರುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ. ಅದೇ ರೀತಿಯಾಗಿ ಬಿಲ್ಲೋಡಿ ಎಂಬ ಗ್ರಾಮದಲ್ಲಿ ನಿನ್ನೆ ರಾತ್ರಿಯಿಂದ ಎ.ಸಿ. ಯವರು ಅಲ್ಲಿಯೇ ಇದ್ದಾರೆ. ನಾವು ಕೂಡ ಸಂಪರ್ಕದಲ್ಲಿದ್ದೇವೆ. ಅಲ್ಲಿಯ ಜನರನ್ನು ಸ್ಥಳಾಂತರ ಮಾಡಿದ್ದೇವೆ. ಅದೇ ರೀತಿಯಾಗಿ ಕೆರೆ ಕಟ್ಟೆಗಳು ಬಹಳಷ್ಟು ಹಾಳಾಗಿವೆ. ಇದರ ಬಗ್ಗೆ ಗಮನವನ್ನು ಕೊಡಬೇಕು. ಸರ್ಕಾರ ಇಲ್ಲಿಯವರೆಗೆ ನಮ್ಮ ತಾಲ್ಲೂಕಿಗೆ 15 ಲಕ್ಷ ರೂಗಳನ್ನು ಬಿಡುಗಡೆ ಮಾಡಿದೆ. 3 ಕೋಟಿ ರೂಗಳನ್ನು ಇಡೀ ಜಿಲ್ಲೆಗೆ ಕೊಟ್ಟಿದ್ದಾರೆಂದು ಜಿಲ್ಲಾದಿಕಾರಿಗಳು ಹೇಳುತ್ತಿದ್ದಾರೆ. ಅದನ್ನು ಹೆಚ್ಚು ಮಾಡಬೇಕು. ಮತ್ತು ಕೂಡಲೇ ಪರಿಹಾರವನ್ನು ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಅರಗ ಜ್ಞಾನೇಂದ್ರರವರು ಹೇಳಿದೆ ಹಾಗೆ ಕಳೆದ 27 ದಿನಗಳಿಂದ 18 ಹಳ್ಳಿಗಳಲ್ಲಿ ಹೊಸನಗರ ತಾಲ್ಲೂಕಿನಲ್ಲಿ ಈಗಲೂ ವಿದ್ಯುತ್ ಇಲ್ಲದಾಗಿದೆ. ಈಗ ಒಂದು ತಿಂಗಳು ಆಯಿತು. ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ಹೇಳುತ್ತೇನೆ, 6–7 ನೇ ತಾರೀಖಿಗೆ ಡ್ಯಾಂ ತುಂಬಿದೆ.

ಅಧ್ಯಕ್ಷರು: ಆಯಿತು, ತಮ್ಮ ಮಾತು ನಿಲ್ಲಿಸಿ.

ಶ್ರೀ ಹೆಚ್. ಹಾಲಪ್ಪ: ಮಳೆ ಎಷ್ಟು ಆಗಿದೆ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: ಮಳೆಯಾಯಿತು ಎಂದು ನೀವು ಮಳೆ ತರಹ ಭಾಷಣ ಮಾಡುವುದೇ? ಆಯಿತು ಬೇಗನೆ ಮುಗಿಸಿ.

ಶ್ರೀ ಹೆಚ್. ಹಾಲಪ್ಪ: ಭಾಷಣ ಮಾಡುವುದಲ್ಲ, ನಾವು ಇಲ್ಲಿ ಹೇಳದೆ ಎಲ್ಲಿ ಹೇಳುವುದು. ಆದ್ದರಿಂದ ಸರ್ಕಾರ ಗಮನಹರಿಸಬೇಕೆಂದು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಗೋಪಾಲಕೃಷ್ಣ ಬೇಳೂರು (ಸಾಗರ): ಮಾನ್ಯ ಅಧ್ಯಕ್ಷರೆ, ನಮ್ಮಲ್ಲೂ ಕೂಡ ಅದೇ ಪರಿಸ್ಥಿತಿಯಾಗಿದೆ. ಸಾಗರ ತಾಲ್ಲೂಕಿನಲ್ಲಿ ಈಗಾಗಲೇ ಹೆಚ್ಚು ಮಳೆ ನೀರು ಬಂದು ಹಳ್ಳಿಗಳೆಲ್ಲಾ ಮುಳುಗಡೆಯಾಗಿದೆ. ಹಿಂದೆ ಒಂದು ಸಾರಿ ಬಿತ್ತನೆ ಬೀಜವನ್ನು ಮಾಡಿ ಒಂದು ಸಾರಿ ಮುಳುಗಡೆಯಾಗಿದೆ. ಈಗ ಮತ್ತೆ ನಾಟಿಯನ್ನು ಮಾಡಿದ್ದಾರೆ. ಆ ನಾಟಿ ಮಾಡಿದ್ದರೂ ಕೂಡ ಈಗ ಅದು ಮುಳುಗಡೆಯಾಗಿ ಸಂಪೂರ್ಣವಾಗಿ ರೈತರು ಎರಡು ಸಾರಿ ಬೆಳೆಯನ್ನು ಕಳೆದುಕೊಂಡಿದ್ದಾರೆ. 1982ನೇ ಇಸವಿಯಲ್ಲಿ ಈ ತರಹ ಮಳೆಯನ್ನು ನೋಡಿದ್ದೇವೆ. ಆ ತರಹ ಮಳೆಯನ್ನು ನಾವು ಈ ಸಾರಿ ನೋಡಿದ್ದೇವೆ. ಸಂಪೂರ್ಣವಾಗಿ ಎಲ್ಲಾ ಗ್ರಾಮಗಳು ಮುಳುಗಿ ಹೋಗಿವೆ. ಅಲ್ಲಿ ಸಂಪರ್ಕಗಳು ಹಾಳಾಗಿವೆ. ಆದರೆ ಇಲ್ಲಿಯವರೆಗೂ ಕೂಡ ನಮಗೆ ತಾತ್ಕಾಲಿಕವಾಗಿ ಯಾವುದೇ ಹಣವನ್ನು ಇವತ್ತಿನವರೆಗೆ ಸರ್ಕಾರದವರು ಬಿಡುಗಡೆ ಮಾಡಿಲ್ಲ. ಅಲ್ಲಿ ಅರ್ಜೆಂಟಾಗಿ ಮಾಡಬೇಕೆಂದು ಡಿಸಿಯವರಿಗೆ ಕೇಳಿದರೆ ಹಣ ಇಲ್ಲವೆಂದು ಅವರು ಹೇಳುತ್ತಿದ್ದಾರೆ. ಅಲ್ಲಿ ಅಧಿಕಾರಿಗಳು ಸಹ ಸರಿಯಾಗಿ ಕೆಲಸವನ್ನು ಮಾಡುತ್ತಿಲ್ಲ. ಜಿಲ್ಲಾಡಳಿತವು ಸಹ ಸರಿಯಾಗಿ ಕೆಲಸವನ್ನು ಮಾಡುತ್ತಿಲ್ಲ. ಈ ಒಂದು ಸಂಪರ್ಕವು ಹಾಳಾಗಿರುವುದರಿಂದ ಅಲ್ಲಿ ದೋಣಿಗಳ ವ್ಯವಸ್ಥೆಯಾಗಬೇಕಿದೆ. ಇವತ್ತು ನಮ್ಮ ಮಲೆನಾಡಿನಲ್ಲಿ ಕೊಟ್ಟಿಗೆ ಮನೆಯೆಂದು ಮಾಡುತ್ತಾರೆ. ಕೊಟ್ಟಿಗೆ ಮನೆ ಮುರಿದು ಹೋದರೆ ಅದಕ್ಕೆ ಪರಿಹಾರ ಇಲ್ಲವೆಂದು ಹೇಳುತ್ತಾರೆ. ಕೊಟ್ಟಿಗೆ ಮನೆಗೆ ಅಷ್ಟೆ ಒಂದು ಅಲ್ಲಿ ಬೆಲೆ ಇದೆ. ಅದಕ್ಕೆ ಸರ್ಕಾರದವರು ಹಣವನ್ನು ಕೊಡುವುದಿಲ್ಲ. ಒಂದು ಮನೆ ಬಿದ್ದು ಹೋದರೆ 1200–1400 ರೂಪಾಯಿಗಳವರೆಗೆ ಪರಿಹಾರವನ್ನು ಕೊಡುತ್ತಿದ್ದಾರೆ. ಅದು ಸಾಕಾಗುವುದಿಲ್ಲ. ಮೊನ್ನೆ ಪತ್ರಿಕೆಯಲ್ಲಿ ಸರ್ಕಾರದವರು ಘೋಷಣೆಯನ್ನು ಮಾಡಿದ್ದಾರೆ. ಒಂದು ಎಕರೆಗೆ 6 ಸಾವಿರ ರೂಪಾಯಿಗಳನ್ನು ಕೊಡಬೇಕು. ಹೆಚ್ಚಿನ ಮನೆಗಳಿಗೆ ಹೆಚ್ಚು ಹಣವನ್ನು ಕೊಡಬೇಕೆಂದು ಹೇಳುತ್ತೇನೆ. ಅದನ್ನು ತಕ್ಷಣ ಜಾರಿಗೊಳಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. flood ನಲ್ಲಿ 25–30 ಕೋಟಿ ರೂಪಾಯಿಗಳು ಒಂದು ತಾಲ್ಲೂಕಿಗೆ ಆಗಿದೆ. ಇವತ್ತಿನವರೆಗೆ ಸರ್ಕಾರದವರು ಹಣವನ್ನು ಬಿಡುಗಡೆ ಮಾಡಿರುವುದಿಲ್ಲ. ನಾವುಗಳು ಕ್ಷೇತ್ರಕ್ಕೆ ಹೋಗುವುದಕ್ಕಾಗುವುದಿಲ್ಲ. ದಯವಿಟ್ಟು ಇದನ್ನು ಮಾಡಬೇಕು. ಈ ಬಗ್ಗೆ ಸರ್ಕಾರದವರು ಘೋಷಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೆ, 15 ದಿನದ ಹಿಂದೆ ಕೇಂದ್ರ ತಂಡವು ವೀಕ್ಷಕರಾಗಿ ಬಂದಿತ್ತು. ಅವರು ವೀಕ್ಷಣೆ ಮಾಡಿರುವುದು ಅರ್ಧ ಗಂಟೆ ಮಾತ್ರ. ಅವರು ಅರ್ಧ ಗಂಟೆಯಲ್ಲಿ ಏನೇನೂ ವೀಕ್ಷಣೆ ಮಾಡಿದರೋ ಗೊತ್ತಿಲ್ಲ. ಅವರು ಮಾತ್ರ ಅರ್ಧ ಗಂಟೆ ಆ ಸ್ಥಳದಲ್ಲಿದ್ದರು. ಇದು ಅವರು ವೀಕ್ಷಣೆ ಮಾಡಿರುವ ರೀತಿಯಾಗಿದೆ. ಇವತ್ತು ನಮ್ಮ ಪರಿಸ್ಥಿತಿ ಹೇಗಿದೆ ಎಂದರೆ, ತಾಲ್ಲೂಕಿಗೆ 10 ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಅತಿವೃಷ್ಟಿ ಪರಿಹಾರ ಎಂದು ಬಿಡುಗಡೆ ಮಾಡಿದ್ದರು. 5 ಹೋಬಳಿ ಅಭಿವೃದ್ಧಿ ವ್ಯಾಪ್ತಿಗೆ ಬರುತ್ತದೆಂದು ಅದನ್ನು ಹಂಚಿ ಎಂದು ಹೇಳಿದರು. ತಲಾ 2-2 ಲಕ್ಷ ರೂಪಾಯಿಗಳನ್ನು ಹಂಚಿದ್ದೇವೆ. ನಿನ್ನೆ ಜನ ಸಂಪರ್ಕ ಸಭೆಗೆ ಹೋದಾಗ ಯಾಕಪ್ಪಾ ಸಭೆಗೆ ಹೋದೆ ಜನರ ಜೊತೆಗೆ ಎಂದು ಅನಿಸಿತು. ಅಲ್ಲಿ ಮೋರಿ ಕಿತ್ತು ಹೋಗಿದೆ, ಇಲ್ಲಿ ರಸ್ತೆ ಕಿತ್ತು ಹೋಗಿದೆ, ನಮ್ಮ ಕಾಫಿ, ಅಡಿಕೆ, ತೆಂಗು, ಏಲಕ್ಕಿ ಎಲ್ಲಾ ತೋಟಗಾರಿಕಾ ಬೆಳೆಗಳು ನೆಲಕಚ್ಚಿವೆ. ಈ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಖುದ್ದು ಅಧ್ಯಯನ ತಂಡವನ್ನು ಅಲ್ಲಿಗೆ ಕಳುಹಿಸಬೇಕು. ಅಲ್ಲಿ ಅವಶ್ಯಕತೆಗಳಿಗೆ ಅನುಗುಣವಾಗಿ ತುರ್ತು ಹಣವನ್ನು ಬಿಡುಗಡೆ ಮಾಡಬೇಕು. ಅಲ್ಲಿ ಮಕ್ಕಳು ಶಾಲೆಗೆ ಹೋಗದೇ ಇರುವಂತಹ ಪರಿಸ್ಥಿತಿಯಾಗಿದೆ. ಸಣ್ಣ ಸಣ್ಣ ಹಳ್ಳದ ಮೋರಿಗಳೆಲ್ಲಾ ತುಂಡಾಗಿ ಅವರು ಆ ಕಡೆಯ ಬದಿಯಲ್ಲಿದ್ದಾರೆ. ಇವರು ಈ ಕಡೆಯ ಬದಿಯಲ್ಲಿದ್ದಾರೆ. ಈ ಪರಿಸ್ಥಿತಿಯಾಗಿದೆ. ಅಲ್ಲಿ ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ (ಮಡಿಕೇರಿ): ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ ಕಳೆದ ಒಂದು ತಿಂಗಳಿಂದ ಹೊಡೆದಂತಹ ಭಾರಿ ಮಳೆಯ ಪರಿಸ್ಥಿತಿ ಇದನ್ನು ಮೊದಲೇ ಸರ್ಕಾರದ ಗಮನಕ್ಕೆ ತಂದಿದ್ದು, ಅಲ್ಲಿ ಸಾಕಷ್ಟು ನಷ್ಟವಾಗಿದೆ. ಈ ರಾಜ್ಯದ ಅಣೆಕಟ್ಟೆಗಳು ಕೊಡಗು ಜಿಲ್ಲೆಯಲ್ಲಿ ಹೊಡೆದಂತಹ ಮಳೆಯಿಂದಾಗಿ ತುಂಬಿ ಹೋಗಿವೆ. ಆದರೆ ಒಂದು ವಾರ ಮಾತ್ರ ಜಿಲ್ಲೆಯಲ್ಲಿ ಮಳೆಯು ಕಡಿಮೆಯಾಗಿತ್ತು. ಮತ್ತೆ ಮೂರು ದಿವಸಗಳಿಂದ ಹೊಡೆದಂತಹ ಮಳೆಯ ಪರಿಣಾಮದ ಬಗ್ಗೆ ಇವತ್ತು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಇಡೀ ಕೊಡಗು ಜಿಲ್ಲೆ ಅಲ್ಲಲ್ಲಿ ದ್ವೀಪದ ತರಹವಾಗಿದೆ. ಅದು ಕಾವೇರಿ ನದಿ ಇರಬಹುದು, ಅದಕ್ಕೆ ಸಂಬಂಧಪಟ್ಟ ಎಲ್ಲಾ ಉಪನದಿಗಳು ತುಂಬಿ

ಹರಿಯುವುದರ ಪರಿಣಾಮವಾಗಿ ಜಿಲ್ಲೆಯಲ್ಲಿ ನಾವು ಎಲ್ಲಿಂದ ಎಲ್ಲಿಗೂ ಹೋಗುವುದಕ್ಕಾಗುತ್ತಿಲ್ಲ. ಇಡೀ ಜಿಲ್ಲೆಯಲ್ಲಿ 5 ಮೋಟಾರು ಬೋಟುಗಳಲ್ಲಿ ಸಂಪರ್ಕವನ್ನು ಜನರು ನೋಡುತ್ತಿದ್ದಾರೆ. ಒಬ್ಬ ಗರ್ಭಿಣಿ ಹೆಂಗಸನ್ನು ಆಸ್ಪತ್ರೆಗೆ ತರಲಿಕ್ಕೆ ಆಗದಂಥ ಪರಿಸ್ಥಿತಿಯನ್ನು ಜಿಲ್ಲೆಯಲ್ಲಿ ಇವತ್ತು ಕಾಣುತ್ತಿದ್ದೇವೆ. ಕೇಂದ್ರದಿಂದ ಒಂದು ತಂಡ ವೀಕ್ಷಣೆಗೆಂದು ಬಂದಿತ್ತು. ಅವರು ಬಂದು ತಲಕಾವೇರಿಗೆ ಹೋಗಲಿಕ್ಕೆ ರಸ್ತೆ ಮುಚ್ಚಿ ಹೋಗಿದೆ, ಭಾಗಮಂಡಲದಲ್ಲಿ ಒಂದು ಪೂಜೆಯನ್ನು ಮಾಡಿ ರಸ್ತೆಯಲ್ಲಿ ನಿಂತು ನೋಡಿಕೊಂಡು ಹೋಗಿದ್ದಾರೆ. ನಮ್ಮ ಜಿಲ್ಲೆಯಲ್ಲಿರುವ ಕಾಫಿ ತೋಟದಲ್ಲಿ ಕಾಫಿ ಕೊಯ್ಯುವ ಅಗತ್ಯವಿಲ್ಲ. ಎಲ್ಲವೂ dropping ಆಗಿದೆ, ಒಣಮೆಣಸನ್ನು ಕೊಯ್ಯುವ ಸಾಧ್ಯತೆ ಇಲ್ಲ. ನೆಟ್ಟಂಥ ಗದ್ದೆ ಯಾವುದೂ ಇಲ್ಲ. ಈ ರೀತಿಯಾದಂಥ ಒಂದು ಪರಿಸ್ಥಿತಿ ಇರುವಾಗ ಜಿಲ್ಲೆಗೆ ಈಗ ಬಿಡುಗಡೆ ಮಾಡಿರುವ ಅನುದಾನ ಏನೇನು ಸಾಲದು, ಒಂದೇ ಒಂದು ಸೇತುವೆ ಕೂಡ ಉಳಿದಿಲ್ಲ. ಮತ್ತೆ 50.00 ಕೋಟಿ ರೂ. ಗಳನ್ನು ಕೊಟ್ಟರೆ ನಮ್ಮ ಜಿಲ್ಲೆಗೆ ಕನಷ್ಠ ವಿದ್ಯುತ್, ರಸ್ತೆ ಸಂಪರ್ಕ ಕಲ್ಪಿಸಲಿಕ್ಕೆ ಸಾಧ್ಯವಾಗಬಹುದು. ಬಹುಶಃ ಕಾಫಿ ಬೆಳೆಯ ನಷ್ಟವನ್ನು ತುಂಬಲಾರದಂಥ ಪರಿಸ್ಥಿತಿಯಲ್ಲಿ ಜನ ಇದ್ದಾರೆ, ಸರ್ಕಾರ ಈ ಜಿಲ್ಲೆಗೆ ವಿಶೇಷವಾದಂಥ ಗಮನ ಕೊಡಬೇಕು, ಏಕೆಂದರೆ ಅಲ್ಲಿ ಮಳೆ ಬೀಳುವುದರಿಂದ ಬೇರೆ ಕಡೆ ಕೆರೆ ಅಣೆಕಟ್ಟುಗಳು ಹಾಳಾಗುತ್ತವೆ, ಆದ್ದರಿಂದ ಇದರ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಶಕುಂತಲಾ ಟಿ. ಶೆಟ್ಟಿ (ಪುತ್ತೂರು):– ಮಾನ್ಯ ಅಧ್ಯಕ್ಷರೇ, ನಮ್ಮ ಕ್ಷೇತ್ರದಲ್ಲಿ ಐದು ಹೊಳೆಗಳು ಅಂದರೆ ಕುಮಾರಧಾರಾ, ನೇತ್ರಾವತಿ ನದಿಗಳಲ್ಲದೆ, ಗೌರಿ, ಸಿರಿಯಾ ಹಾಗೂ ಗುಂಡ್ಯಾ ನದಿಗಳು ಉಕ್ಕಿ ಹರಿಯುತ್ತಿವೆ. ನಮ್ಮಲ್ಲಿ ಮುಳುಗು ಸೇತುವೆಗಳು ಜಾಸ್ತಿಯಿರುವ ಕಾರಣ ಸೇತುವೆ ಎಲ್ಲಿದೆ, ರಸ್ತೆಗಳು ಎಲ್ಲಿವೆ ಎಂಬುದು ಗೊತ್ತಾಗುತ್ತಿಲ್ಲ. ಜನ ಸಂಪರ್ಕ ಆಚೆಯಿಂದ ಈಚೆಗೆ ಬರುವುದಕ್ಕೆ, ನಮ್ಮ ಪುತ್ತೂರು ಕೇಂದ್ರಕ್ಕೆ ಬರಲಿಕ್ಕೆ ಕಷ್ಟವಾಗಿದೆ. ಎಲ್ಲಾ ರಸ್ತೆಗಳಲ್ಲೂ ಗುಂಡಿಗಳು ತುಂಬಿ ಈಗ ಪತ್ರಿಕೆಗಳಲ್ಲಿ ಮೃತ್ಯು ಗುಂಡಿಗಳು ಎಂದು ಬರೆಯುವ ಸನ್ನಿವೇಶ ಬಂದಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಸಹ ಮಳೆಯಿಂದ ಬಹಳಷ್ಟು ಹಾನಿಯಾಗಿರುವುದರಿಂದ ನಮ್ಮ ಜಿಲ್ಲೆಗೂ ಅತೀ ಹೆಚ್ಚು ಹಣವನ್ನು ಒದಗಿಸಬೇಕಾಗಿ ಕೋರುತ್ತೇನೆ.

ಶ್ರೀ ಸುನಿಲ್ ಕುಮಾರ್ (ಕಾರ್ಕಳ):– ಕಳೆದ ಕೆಲವು ದಿನಗಳಿಂದ ಆ ಭಾಗಗಳಲ್ಲಿ ಬೀಳುತ್ತಿರುವ ಮಳೆಯಿಂದ ವಿಶೇಷವಾಗಿ ಆಸಕ್ತಿ ವಹಿಸಿ ಮಾತನಾಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಕಳೆದ ವಾರ ಬಂದಂಥ ಸುಂಟರಗಾಳಿಯಿಂದ ಸಾಣೂರು ಎಂಬ ಗ್ರಾಮದಲ್ಲಿ ಸುಮಾರು ನೂರಾರು ಎಕರೆಗಳಷ್ಟು ತೋಟಗಳು ನಾಶವಾಗಿವೆ. ತೆಂಗಿನ ಮರಗಳು, ಅಡಿಕೆ ಮರಗಳು ಸಂಪೂರ್ಣ ನಾಶವಾಗಿ ದೊಡ್ಡ ಪ್ರಮಾಣದ ನಷ್ಟವಾಗಿದೆ, ಅದರ ಜೊತೆಯಲ್ಲಿ ಹಾಲಪ್ಪನವರು ಹೇಳಿದಂತೆ ಒಂದು ತಿಂಗಳಿನಿಂದ ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ತಿನ ಸರಬರಾಜು ಇಲ್ಲ. ಇಡೀ ಜನ ರಾತ್ರಿ ವೇಳೆ ಕಗ್ಗತ್ತಲಿನಲ್ಲಿ ಕಳೆಯುವಂಥ ಸ್ಥಿತಿ ನಿರ್ಮಾಣವಾಗಿದೆ. ಯಾವ ಕಾರಣದ ಹಿನ್ನಲೆಯಲ್ಲಿ ಮೆಸ್ಕಾಂ ಅಧಿಕಾರಿಗಳು ಅದನ್ನು ರಿಪೇರಿ ಮಾಡುವಂಥ ಕೆಲಸವನ್ನು ಒಂದು ತಿಂಗಳಿನಿಂದ ಮಾಡಿಲ್ಲ. ಸುಮಾರು ಒಂದು ತಿಂಗಳಿನಿಂದ ಇವತ್ತಿನವರೆಗೂ ಹಲವಾರು ಗ್ರಾಮಗಳಲ್ಲಿ ವಿದ್ಯುತ್ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನಲೆಯಲ್ಲಿ ಸರ್ಕಾರ ಕೊಡುವಂಥ ಪರಿಹಾರ ಅದು ಮನೆ ಕುಸಿತದಿಂದ ಆಗಿರಬಹುದು, ರಸ್ತೆ ಅಥವಾ ಮೋರಿ ಹಾಳಾದಂತಹ ಸಂದರ್ಭ ಇರಬಹುದು, ಇದಕ್ಕೆ ಸರ್ಕಾರ ಕೊಡುವ ಪರಿಹಾರ ಯಾವುದೇ ಕಾರಣಕ್ಕೂ ಸಾಕಾಗಲಿಕ್ಕಿಲ್ಲ. ಈ ವರ್ಷ ವಿಪರೀತವಾಗಿ ಬಿದ್ದಂತಹ ಮಳೆಯ ಹಿನ್ನಲೆಯಲ್ಲಿ ಸರ್ಕಾರ ಒಂದು ವಿಶೇಷವಾದಂಥ ಪ್ಯಾಕೇಜ್ ಅನ್ನು ಇದಕ್ಕೆ ಘೋಷಣೆ ಮಾಡಬೇಕು. ಈ ಪ್ಯಾಕೇಜ್ ಅನ್ನು ಘೋಷಣೆ ಮಾಡಿದರೆ ಮಾತ್ರ ಇದಕ್ಕೇನಾದರೂ ಒಂದು ಒಳ್ಳೆಯ ರೀತಿಯಾದಂಥ ಪರಿಹಾರವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲವಾದರೆ ಮನೆ ಬಿದ್ದಾಗ ಕೇವಲ 1,000–00, ಒಂದು ಅಡಿಕೆ ಮರಕ್ಕೆ 40–00 ರೂ.ಗಳಂತೆ ಪರಿಹಾರವನ್ನು ಕೊಟ್ಟರೆ ಯಾವುದೇ ರೀತಿಯ ನಷ್ಟವನ್ನು ತುಂಬಲಿಕ್ಕೆ ಸಾಧ್ಯವಿಲ್ಲ. ಆ ಹಿನ್ನೆಲೆಯಲ್ಲಿ ಸರ್ಕಾರ ಒಂದು ವಿಶೇಷವಾದ ಪ್ಯಾಕೇಜ್ ಅನ್ನು ಈ ಮಲೆನಾಡಿನ ಭಾಗಕ್ಕೆ ಘೋಷಣೆ ಮಾಡಬೇಕೆಂದು ಸರ್ಕಾರದಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಶಿವರಾಜ ಸಜ್ಜನರ್ (ಹಾವೇರಿ):– ಈಗ ಮಲೆನಾಡು ಭಾಗದ ಪರಿಸ್ಥಿತಿಯ ಬಗ್ಗೆ ಆ ಭಾಗದ ನಮ್ಮ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ನಮ್ಮ ಹಾವೇರಿ ಜಿಲ್ಲೆ ಅರೆ ಮಲೆನಾಡು ಮತ್ತು ಬಯಲುಸೀಮೆ

ಆಗಿರುವುದರಿಂದ ಆ ಭಾಗದಲ್ಲಿಯೂ ಈ ತಿಂಗಳು ಮತ್ತು ಕಳೆದ ತಿಂಗಳೂ ಸುರಿದಂಥ ಭಾರಿ ಮಳೆಗೆ ಅಲ್ಲಿರುವಂಥ ಎಲ್ಲಾ ಬೆಳೆಗಳು ನಾಶವಾಗಿವೆ, ರಸ್ತೆಗಳು ಸಂಪೂರ್ಣವಾಗಿ ಇವತ್ತು ಹದಗೆಟ್ಟು ಹೋಗಿರುವುದರಿಂದ ಸಾವಿರಾರು ಸಂಖ್ಯೆಯಲ್ಲಿ ಮನೆಗಳು ಬೀಳುವ ಪರಿಸ್ಥಿತಿ ನಿರ್ಮಾಣವಾಗಿವೆ. ಮಲೆನಾಡಿನಲ್ಲಿ ಭತ್ತ, ತೆಂಗು, ಅಡಿಕೆ ಇರುವುದರಿಂದ ಅವರು ಹೆಚ್ಚಿನ ಪ್ರಮಾಣದಲ್ಲಿ ಹಾನಿಯನ್ನು ಅನುಭವಿಸುತ್ತಿದ್ದಾರೆ. ಆದರೆ ನಮ್ಮ ಭಾಗದಲ್ಲಿ ಗೋವಿನ ಜೋಳ, ಮೆಣಸಿನ ಗಿಡ, ಸೋಯಾಬೀನ್ ಮತ್ತು ಹತ್ತಿ ಬೆಳೆಗಳು ಮಲೆನಾಡಿನಲ್ಲಿರುವಂಥ ಬೆಳೆಗಳಲ್ಲ. ಬಯಲು ಸೀಮೆ ಬೆಳೆಗಳಾಗಿದ್ದು ಅಲ್ಲಿ ಬಹಳಷ್ಟು ಮಳೆಯಾಗಿರುವುದರಿಂದ ಆ ಎಲ್ಲಾ ಬೆಳೆಗಳು ಇವತ್ತು ಹಾಳಾಗುತ್ತಿವೆ. ದಯವಿಟ್ಟು ಸನ್ಮಾನ್ಯ ಸಭಾಧ್ಯಕ್ಷರು ಸಂಬಂಧಪಟ್ಟ ಸಚಿವರಿಗೆ ಸೂಚನೆಯನ್ನು ಕೊಟ್ಟು ನಮ್ಮ ಹಾವೇರಿ ಜಿಲ್ಲೆಯಲ್ಲಿ ಆಗಿರುವಂಥ ಹಾನಯನ್ನು ಪರಿಶೀಲಿಸಿ ತಕ್ಷಣ ಬೆಳೆ ಹಾನಿಗೆ ಕೊಡಬೇಕಾದಂಥ ಪರಿಹಾರವನ್ನು ಒದಗಿಸಬೇಕು ಮತ್ತು ಯಾರ ಮನೆಗಳು ಬಿದ್ದಿವೆ, ಅದರ ಸಂಪೂರ್ಣವಾದಂಥ ಸರ್ವೆಯನ್ನು ಮಾಡುವುದರ ಮೂಲಕ ಹೆಚ್ಚಿನ ಪರಿಹಾರವನ್ನು ಮತ್ತು ರಸ್ತೆಗಳು ಸಂಪೂರ್ಣವಾಗಿ ಹದಗೆಟ್ಟು ಹೋಗಿರುವುದರಿಂದ ಹೆಚ್ಚಿನ ಹಣಕಾಸಿನ ನೆರವನ್ನು flood damage fund ನಿಂದ ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಅಂಜನಾಮೂರ್ತಿ:– ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ಇಡೀ ಸದನ ಪಕ್ಷ ಭೇದ ಮರೆತು ಪಕ್ಷಾತೀತವಾಗಿ ಸನ್ಮಾನ್ಯ ಪಂಚಾಯತ್ ರಾಜ್ ಸಚಿವರನ್ನು ಒತ್ತಾಯ ಮಾಡಿದೆ, ಸುವರ್ಣ ಗ್ರಾಮ ಆಯ್ಕೆಯಲ್ಲಿ...

ಅಧ್ಯಕ್ಷರು:– ಈಗ ನೆರೆ ಹಾವಳಿಯ ಮೇಲೆ ಮಾತನಾಡುತ್ತಿದ್ದಾರೆ, ನೀವು ಆಮೇಲೆ ಮಾತನಾಡಿ.

ಶ್ರೀ ಎಸ್.ಎಸ್.ಪಾಟೀಲ್(ಮುಂಡರಗಿ):– ಸನ್ಮಾನ್ಯ ಅಧ್ಯಕ್ಷರೇ..

ಅಧ್ಯಕ್ಷರು:– ನಿಮ್ಮದು ಬಯಲು ಸೀಮೆಯಲ್ಲವೇ, ನಿಮ್ಮ ಕಡೆ ಮಳೆಯಾಗಿದೆಯೆ? ನಿಮ್ಮಲ್ಲಿ ನೆರೆ ಹಾವಳಿ ಇಲ್ಲವಲ್ಲ..

ಶ್ರೀ ಎಸ್.ಎಸ್. ಪಾಟೀಲ್:– ಅಧ್ಯಕ್ಷರೇ, ನಾವು ಬಯಲು ಸೀಮೆಯಿಂದ ಬಂದವರು. ನಮ್ಮಲ್ಲಿ ಏನೂ ಆಗಿಯೇ ಇಲ್ಲವೆಂದು

ಅರ್ಥವಾಗಬಾರದು. ಬಹುಶಃ ಅಧ್ಯಕ್ಷರೇ, ನಮ್ಮಲ್ಲಿ ಮಳೆಯಾಗುವುದೇ ವಿರಳ, ನಾವು ಬರಪೀಡಿತ ಪ್ರದೇಶಕ್ಕೆ ಸೇರಿದವರು. ನಮ್ಮಲ್ಲಿ ಮಾಳಿಗೆ ಮನೆಗಳು ಬರೆ ಮಣ್ಣಿನಿಂದ ಮಾಡಿರುತ್ತಾರೆ. ಎರಡು ತಿಂಗಳುಗಳಿಂದ ಮಳೆ ಬೀಳುತ್ತಿರುವುದರಿಂದ ಈಗಾಗಲೇ ಆ ಮನೆಗಳು ಕುಸಿಯುತ್ತಿವೆ. ರಸ್ತೆಗಳೆಲ್ಲಾ ಕೆಟ್ಟು ಹೋಗಿವೆ. ಸುಮಾರು 25 ವರ್ಷದಲ್ಲಿ ಈ ರೀತಿ ಮಳೆಯಾಗುತ್ತಿರುವುದು. ನಮ್ಮಲ್ಲಿರುವ ಮಾಳಿಗೆ ಮನೆಗಳ ಜಂತೆಯಿಂದ ನೀರು ಸೋರುತ್ತಿದೆ. ಜನರು ಗುಡಾರ ಕಟ್ಟಿಕೊಂಡು ಅಡಿಗೆ ಮಾಡುತ್ತಿದ್ದಾರೆ. ಮಳೆಯಿಂದಾಗಿ ಧಾರವಾಡ ಜಿಲ್ಲೆಯಲ್ಲಿ ಈಗಾಗಲೇ ಮೂರು ಜನ ಸತ್ತಿದ್ದಾರೆ. ನಮ್ಮಲ್ಲಿ ಐದಾರು ಮನೆಗಳು ಬಿದ್ದವು, ಆದರೆ ಯಾವುದೇ ಸಾವು ನೋವು ಆಗಲಿಲ್ಲ. ಈ ಕಾರಣದಿಂದ ನಮ್ಮಲ್ಲಿಯೂ ಕೂಡ ಬಹಳ ತೊಂದರೆಯಿದೆ. ಮನೆಗಳು ಬಿದ್ದಿವೆ, ಹಣ ಸರಿಯಾಗಿ ಬಿಡುಗಡೆಯಾಗಿಲ್ಲ. ನಮ್ಮಲ್ಲಿ ರಸ್ತೆಗಳು ಕೆಟ್ಟಿವೆ. ಎರಡು ತಿಂಗಳುಗಳಿಂದ ಮಳೆ ಬೀಳುತ್ತಿರುವುದರಿಂದ ಸಂಪೂರ್ಣವಾಗಿ ಹೊರಗೆ ಬರಲಾರದಂಥ ಪರಿಸ್ಥಿತಿ ನರ್ಮಾಣವಾಗಿದೆ. ಆ ಕಾರಣದಿಂದ ಸರ್ಕಾರದವರು ನಮ್ಮ ಭಾಗಕ್ಕೂ ಹೆಚ್ಚು ಹಣ ಬಿಡುಗಡೆ ಮಾಡಬೇಕೆಂದು ವಿನಂತಿಸುತ್ತೇವೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ):– ಕಳೆದ ಒಂದೂವರೆ ತಿಂಗಳಿನಿಂದ ವಿಪರೀತ ಗಾಳಿ ಮಳೆಯಿಂದ ಅನೇಕ ಮರಗಳು ಬಿದ್ದು ಮನೆಗಳು ಕುಸಿದು ಸಾವು ನೋವು ಸಂಭವಿಸಿವೆ. ವಿದ್ಯುತ್ ಕಂಬಗಳು ಬಿದ್ದು ಬಹಳವಷ್ಟು ನಷ್ಟವಾಗಿತ್ತು. ಪುನಃ ಇವತ್ತು ಮಧ್ಯದಲ್ಲಿ ಮಳೆಯೇ ಬರಲಿಲ್ಲ. ಹಾಗಾಗಿ ನಿನ್ನೆ ಸಂಜೆವರೆಗೆ ಎಷ್ಟು ಹಾನಿಯಾಗಿದೆ, ನಮ್ಮಲ್ಲಿ ಸಮುದ್ರ, ನದಿಗಳ ಕೊರೆತದಿಂದ ರಸ್ತೆಗಳು ಸಂಪೂರ್ಣ ಹಾಳಾಗಿವೆ, ಇದರಿಂದ ಎಷ್ಟು ನಷ್ಟವಾಗಿದೆಯೆಂದು ಜಿಲ್ಲಾಧಿಕಾರಿಯಿಂದ ಏನಾದರೂ ಮಾಹಿತಿ ಬಂದಿದೆಯೆ? ಇದಕ್ಕೆ ಸರ್ಕಾರ ತಕ್ಷಣ ಏನು ಕ್ರಮವನ್ನು ತೆಗೆದುಕೊಳ್ಳುತ್ತದೆಂದು ನಾನು ತಮ್ಮ ಮುಖೇನ ಕಳ ಕಳಿಯಿಂದ ಕೇಳಲಿಚ್ಛಿಸುತ್ತೇನೆ.

ಶ್ರೀ ಕೆ.ಪ್ರಭಾಕರ ಬಂಗೇರ (ಬೆಳ್ತಂಗಡಿ):– ನಮ್ಮ ಕಡೆಯಲ್ಲಿಯೂ ಕೂಡ ಧಾರಾಕಾರವಾಗಿ ಮಳೆ ಸುರಿಯುತ್ತಿದೆ. ಈಗ ನದಿಗಳು ತುಂಬಿ ಹರಿಯುತ್ತಿರುವುದರಿಂದ ನದಿ ಕೊರೆತ ಕೂಡ ಆರಂಭವಾಗಿದೆ. ಅದರೊಂದಿಗೆ ಸಾವಿರಾರು ಅಡಿಕೆ ಮರಗಳು ಕೊಚ್ಚಿ ಹೋಗಿವೆ, ಮತ್ತೊಂದು ಕಡೆ ಆನೆಗಳ

ಹಾವಳಿ ಕೂಡ ಆಗಿವೆ, ಈ ಬಗ್ಗೆ ಕಳೆದ ವಾರ ನಾನು ಪ್ರಸ್ತಾಪ ಮಾಡಿದ್ದೆನು. ಸಿಸಿಲ ಎಂಬ ಗ್ರಾಮಕ್ಕೆ ಕಾಡಿನಿಂದ ಬಂದಂಥ ಆನೆಗಳು ಅಡಿಕೆ ಮರಗಳು, ಬಾಳೆ ಗಿಡಗಳನ್ನು ನಷ್ಟ ಮಾಡಿವೆ. ಹಾಗಾಗಿ ತಮ್ಮ ಮೂಲಕ ನಾನು ವಿನಂತಿಸುವುದೇನೆಂದರೆ ಆ ನದಿ ಕೊರೆತ ಆಗದಂತೆ ತಡೆಗೋಡೆಯನ್ನು ಕಟ್ಟಲಿಕ್ಕೆ, ಮನೆ ಕುಸಿತವಾಗಿರುವುದರಿಂದ ಮನೆಗಳಿಗೂ ಕೂಡ ಪರಿಹಾರವನ್ನು ಕೊಡುವ ದೃಷ್ಟಿಯಲ್ಲಿ ಸರ್ಕಾರ ಹೆಚ್ಚು ಹಣವನ್ನು... ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಮನವಿ ಮಾಡುತ್ತೇನೆ.

ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು):– ನಮ್ಮ ಕ್ಷೇತ್ರದಲ್ಲಿ 4ನೇ ತಾರೀಕು ವಿಪರೀತ ಮಳೆ ಬಂದು ಆರೋಗ್ಯ ಇಲಾಖೆಯಲ್ಲಿ ಡಿ.ಗ್ರೂಪ್ ನೌಕರರಾಗಿದ್ದ ಪರಿಶಿಷ್ಟ ಜಾತಿಗೆ ಸೇರಿದವರಾದ ಶ್ರೀ ಚಂದ್ರಶೇಖರ್‌ರವರ ಹೆಂಚಿನ ಮನೆ ಕುಸಿದು ಅವರು ಮೃತರಾಗಿದ್ದಾರೆ. ಅವರ ಕಳೇಬರವನ್ನು ನಾನು ನೋಡಿ ಬಂದಿದ್ದೇನೆ. ಅವರ ಕುಟುಂಬ ವರ್ಗದವರಿಗೆ ತುರ್ತು ಪರಿಹಾರ ಕೊಡಬೇಕು. ಅಲ್ಲದೆ ಅವರ ಮನೆ ಕುಸಿದಿರುವುದರಿಂದ ಆಶ್ರಯ, ಇಂದಿರಾ ಅಥವಾ ಅಂಬೇಡ್ಕರ್ ಯೋಜನೆ, ಯಾವುದೇ ಯೋಜನೆಯಡಿ ಒಂದು ಮನೆಯನ್ನು ಕೊಡಬೇಕು, ಅವರ ಕುಟುಂಬ ವರ್ಗದಲ್ಲಿ ಅವರ ಮಗನಿಗೆ ನೌಕರಿಯನ್ನು ಕೊಡಬೇಕು ಎಂದು ಈ ಸಂದರ್ಭದಲ್ಲಿ ಆಗ್ರಹಪಡಿಸುತ್ತೇನೆ. ಹಾಗೆಯೇ ಮಳೆಯ ಕಾರಣದಿಂದಾಗಿ ಹಲವಾರು ರಸ್ತೆಗಳು ಹಾಳಾಗಿವೆ. ಸಮುದ್ರದ ಕೊರೆತ ವಿಪರೀತವಾಗಿದೆ. ಇದಕ್ಕೆ ಸನ್ಮಾನ್ಯ ಮಂತ್ರಿಗಳು ಹಾಗೂ ಸರ್ಕಾರದ ವತಿಯಿಂದ ನಮಗೆ ಪರಿಹಾರವನ್ನು ಒದಗಿಸಿಕೊಡಬೇಕಾಗಿ ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಸರಿಕರ್ ಭೀಮಪ್ಪ ಚನ್ನಪ್ಪ(ರಾಯಭಾಗ):– ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು:– ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ. ಒಂದು ನಿಮಿಷ ಮಾತನಾಡಿ.

ಶ್ರೀ ಸರಿಕರ್ ಭೀಮಪ್ಪ ಚನ್ನಪ್ಪ (ರಾಯಭಾಗ):– ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳು. ನಮ್ಮ ಇಡೀ ಬೆಳಗಾವಿ ಜಿಲ್ಲೆಯ ರಾಯಭಾಗ, ಅಥಣಿ, ಕಾಗವಾಡು ಮತ್ತು

ಚಿಕ್ಕೋಡಿಯಲ್ಲಿ ಮಳೆ ಹೆಚ್ಚಾಗಿದ್ದು, ಈ flood ಬಂದ ಕಾರಣ ಜನರಿಗೆ ಬಹಳ ಕಷ್ಟವಾಗಿದೆ, ಕಬ್ಬಿನ ಬೆಳೆಗಳೆಲ್ಲಾ ಹಾಳಾಗಿ ನಷ್ಟವಾಗಿದೆ, ಇದಕ್ಕೆ ಸರ್ಕಾರದಿಂದ ಇನ್ನೂ ಪರಿಹಾರ ಕೊಟ್ಟಿಲ್ಲ. ಹಾಗೆಯೇ ರಾಯಭಾಗ ತಾಲ್ಲೂಕಿನ ಕುಡಚಿ ಬ್ರಿಡ್ಜ್ ಸಹ ಹೋದ ತಿಂಗಳಲ್ಲಿ 10–12 ದಿವಸಗಳವರೆಗೆ ಬ್ರಿಡ್ಜ್ ಬಂದ್ ಆಗಿತ್ತು. ಈಗ ನಾಲ್ಕು ದಿವಸಗಳಿಂದ ಮಳೆ ಮುಂದುವರೆದಿರುವುದರಿಂದ ಮತ್ತೆ ಆ ಬ್ರಿಡ್ಜ್ ಬಂದ್ ಆಗಿದೆ. ಅದಕ್ಕೆ ನಾನು ಈ ಸರ್ಕಾರ ಹಾಗೂ ಹಿಂದಿನ ಸರ್ಕಾರದಲ್ಲಿ ಸಹ ಪದೇ ಪದೇ ರಿಕ್ವೆಸ್ಟ್ ಮಾಡಿದ್ದೆ. ಆ ಕುಡಚಿಯ ಬ್ರಿಡ್ಜ್ ಸಲುವಾಗಿ ಏನಾದರೂ ಮಾಡಿ ನನಗೆ 8 ಕೋಟಿ ಅಥವಾ 9 ಕೋಟಿ ರೂಪಾಯಿ ಕೊಡಬೇಕೆಂದು 4–5 ಸಲ ಪತ್ರವನ್ನು ಬರೆದರೂ ಸಹ ಸರ್ಕಾರ ಇನ್ನೂವರೆಗೆ ಯಾವುದೇ ರೀತಿ ಸ್ಪಂದಿಸಲಿಲ್ಲ. ಅದಕ್ಕೆ ನಾನು ಇದೂ ಅಲ್ಲದೇ ನಮ್ಮ ರೈತರ ಸಲುವಾಗಿ ಈಗೇನು ಬೆಳೆ ಹೆಚ್ಚಾಗಿ ಹಾಳಾಗಿದೆ, ಅದಕ್ಕೆ ತಾವು ಪರಿಹಾರ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅದಕ್ಕೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):– ಬೆಳಿಗ್ಗೆ ಸುಮಾರು ಒಂದು ಗಂಟೆಯ ಕಾಲ ಶಿವಮೊಗ್ಗ ಜಿಲ್ಲಾಧಿಕಾರಿಗಳು ಅಲ್ಲಿರುವ ಪರಿಸ್ಥಿತಿ ಏನು ಇದೆ, ಅದನ್ನು ನನಗೆ ಮನವರಿಕೆ ಮಾಡುವಂತಹ ಪ್ರಯತ್ನವನ್ನು ಮಾಡಿದರು. ನಮ್ಮೆಲ್ಲಾ ಗೌರವಾನ್ವಿತ ಸದಸ್ಯರುಗಳು ಹೇಳಿದಂತೆ ಒಂದು ರೀತಿ ಮಲೆನಾಡು ಜಿಲ್ಲೆಗಳು ಎಲ್ಲವೂ ಜಲಾವೃತಗೊಂಡಿರುವಂತಹದು, ಅನೇಕ ಮನೆಗಳು ಬಿದ್ದಿರುವಂತಹದು, ಅನೇಕ ಸಾವು–ನೋವುಗಳು ಆಗಿರುವಂತಹದು ಮತ್ತು ರಸ್ತೆಗಳು, ಸೇತುವೆಗಳು ಮುಳುಗಿ ಹೋಗಿರುವಂತಹ ಈ ರೀತಿಯ ದಾರುಣವಾದ ಪರಿಸ್ಥಿತಿ ಇದೆ. ಅದಕ್ಕಿಂತ ಹೆಚ್ಚಾಗಿ ನಾನು ಶಿಕಾರಿಪುರ ತಾಲ್ಲೂಕಿನಿಂದ ಹೆಚ್ಚು ದೊಡ್ಡ ಪ್ರಮಾಣದಲ್ಲಿ ಮುಸುಕಿನ ಜೋಳ, ಗೋವಿನ ಜೋಳ ಬೆಳೆ ಬೆಳೆಯುವಂತಹ ಕ್ಷೇತ್ರದಿಂದ ಬಂದಂಥವನು. ಒಂದು ಎಕರೆಯಲ್ಲೂ ಸಹ ನಮಗೆ ಇನ್ನೂ ಗೋವಿನ ಬೆಳೆ ಜೋಳ ಸಿಗುತ್ತದೆ ಎನ್ನುವ ಪ್ರಶ್ನೆ ಇಲ್ಲ. ಪರ್ಯಾಯ ಬೆಳೆ ಬೆಳೆಯುವುದಕ್ಕೂ ಸಾಧ್ಯ ಇಲ್ಲ. ಅಲ್ಲಿ ಮತ್ತೆ ಭತ್ತವನ್ನೂ

ಬೆಳೆಯುವುದಕ್ಕೆ ಸಾಧ್ಯವಿಲ್ಲ, ಬೇರೆ ಬೆಳೆಯನ್ನೂ ಬೆಳೆಯುವುದಕ್ಕೆ ಆಗುವುದಿಲ್ಲ. ಸಂಪೂರ್ಣ ನಾಶ ಆಗಿದೆ ಎನ್ನುವುದನ್ನು ಸ್ವತಃ Deputy Commissioner ಅವರು ಹೇಳಿದರು. ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರುಗಳಿಗೆ ನಾವು ತತ್‌ಕ್ಷಣ ಕಂದಾಯ ಸಚಿವರು, ಹೋಮ್ ಮಿನಿಸ್ಟರ್ ಅವರು ಕುಳಿತು ಮಾತನಾಡಿ ಈ ಅಧಿವೇಶನ ಮುಗಿದ ತಕ್ಷಣ ನಮ್ಮ ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರು, ಅಲ್ಲಿನ ಜಿಲ್ಲಾಡಳಿತದ ಜೊತೆಗೆ ಒಟ್ಟಿಗೇ ಪ್ರವಾಸ ಮಾಡಿ ಅಲ್ಲಿನ ವಾಸ್ತವಿಕ ಪರಿಸ್ಥಿತಿ ಏನು ಎನ್ನುವಂತಹ ವರದಿಯನ್ನು ತಂದು ಕೊಡುವಂತಹದು. ಅದನ್ನು ನಮ್ಮ ಕ್ಯಾಬಿನೆಟ್‌ನಲ್ಲಿ ವಿಶೇಷ ಮಂತ್ರಿ ಮಂಡಲದ ಸಭೆಯನ್ನು ಕರೆಯಲು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಇದರ ಬಗ್ಗೆ ಚರ್ಚೆ ಮಾಡಿ ಆದಷ್ಟು ಬೇಗ ಇದಕ್ಕೆ ಪರಿಹಾರ ಹುಡುಕುವಂತಹ ಒಂದು ವಿಶೇಷವಾದಂತಹ ಪ್ರಯತ್ನವನ್ನು ನಾವು ಮಾಡಲೇಬೇಕಾಗಿದೆ. ಒಂದು ರೀತಿ ದೈವಿಕವಾಗಿ ನಮ್ಮ ವಿಧಾನ ಮಂಡಲದ ಅಧಿವೇಶನ ಬೇರೆ ಬೇರೆ ಕಾರಣಕ್ಕಾಗಿ 6–7ಕ್ಕೆ ಇಲ್ಲಿ ಸೇರಿರುವುದರಿಂದ ಇಲ್ಲಿ ವ್ಯಾಪಕವಾದಂತಹ ಚರ್ಚೆ ಮಾಡಲು ಅನುಕೂಲ ಆಯಿತು. ಮಾನ್ಯ ಹೋಮ್ ಮಿನಿಸ್ಟರ್ ಉತ್ತರ ಕೊಡಬಹುದು. ನಾನು ಅವರ ಹತ್ತಿರ ವಿನಂತಿ ಮಾಡುತ್ತಾ ಚರ್ಚೆ ಮಾಡುತ್ತಿದ್ದೆ. ಈ ಸಂಬಂಧಪಟ್ಟಂತಹ 4–5 ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಒಂದೆರಡು ಮೂರು ಗಂಟೆಗೆ ಇಲ್ಲಿಗೇ ಕರೆಸಿಕೊಳ್ಳಬಹುದು. ನಾವು ಅಲ್ಲಿ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಸಮಾಲೋಚನೆ ಮಾಡಿ ಪ್ರವಾಸ ಮಾಡುವುದು ಬೇರೆ. ವಾಸ್ತವಿಕ ವರದಿಯನ್ನು ತರಿಸುವುದು ಬೇರೆ. ಮತ್ತೆ ಯಾವ ಸಂದರ್ಭದಲ್ಲಿ ಕೇಂದ್ರದಿಂದ ಟೀಮ್ ಬರುತ್ತದೆ. ಇಲ್ಲ ಮಳೆ ನಿಂತ ಮೇಲೆ ಬರುತ್ತದೆ, ಇಲ್ಲಾ ಕೆರೆಕಟ್ಟೆಗಳೆಲ್ಲಾ ಖಾಲಿ ಆಗಿ ಪರಿಸ್ಥಿತಿ ಸುಧಾರಣೆ ಆದ ಮೇಲೆ ಬರುತ್ತಾರೆ. ಅದಕ್ಕೆ ನಾವು ಕೇಂದ್ರವನ್ನು ತತ್‌ಕ್ಷಣ ಸಂಪರ್ಕ ಮಾಡಿ ಈಗ ತುರ್ತಾಗಿ ಕೇಂದ್ರದಿಂದ ಒಂದು ಸಮಿತಿ ಬಂದು ನೋಡಿದರೆ ಆಗ ಅವರಿಗೆ ಯಾವ ಅಗಾಧ ಪ್ರಮಾಣದಲ್ಲಿ ಲಾಸ್ ಆಗಿದೆ ಎಂದು ಮನವರಿಕೆ ಆಗುತ್ತದೆ. ಕೇಂದ್ರದಿಂದ ಹೆಚ್ಚು ಪರಿಹಾರವನ್ನು ಕೊಡಲೇ ಬೇಕಾಗುತ್ತದೆ. ಬಹುಶಃ ಪ್ರಧಾನಿಯವರು ಬರುವ ಟೈಮ್ ನಲ್ಲಿ ಮುಂಚೆಯೇ ಇದು ಗೊತ್ತಾಗಿದ್ದರೆ, ಆಗ ಆ ಸಂದರ್ಭ ಇರಲಿಲ್ಲ. ಇಲ್ಲದೇ ಇದ್ದರೆ ನಾವು ಮಾನ್ಯ ಪ್ರಧಾನಿ

ಅವರನ್ನೂ ಮನವಿ ಮಾಡಬಹುದಿತ್ತು. ಹೊಸದಾಗಿ ಕೇಂದ್ರಕ್ಕೆ ಈಗ ಆಗಿರುವ ಲುಕ್ಸಾನು ಬಗ್ಗೆ ಇನ್ನೊಂದು ವಿಶೇಷವಾದಂತಹ ವರದಿಯನ್ನು ನಾವು ಕಳುಹಿಸಬೇಕಾಗುತ್ತದೆ. ಎಲ್ಲಾ ಕಡೆ ಇದೇ ಅನಾಹುತದ ಸುದ್ದಿಗಳು ಬರುತ್ತಿವೆ. ಅದೂ ಮತ್ತು ನಮ್ಮ ಕಡೆಯಿಂದಲೂ ಸ್ವಲ್ಪ ಹಣವನ್ನು ಬಿಡುಗಡೆ ಮಾಡಿ, ತತ್‌ಕ್ಷಣಕ್ಕೆ ಪರಿಹಾರವನ್ನು ಕೊಡುವಂತಹದು ಅನಿವಾರ್ಯವಾಗಿ ನಾವು ಮಾಡಲೇ ಬೇಕಾಗುತ್ತದೆ. ಇಲ್ಲದೇ ಇದ್ದರೆ ರೈತ ಬದುಕುವುದಕ್ಕೆ ಆಗುವುದೇ ಇಲ್ಲ. ಅಂತಹ ಒಂದು ಉಸಿರು ಕಟ್ಟುವಂತಹ ಪರಿಸ್ಥಿತಿ ಇದೆ. ಇದರ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಜೊತೆ ನಮ್ಮ ಶಾಸಕರು ಏನು ವಿಷಯಗಳನ್ನು ತಂದಿದ್ದಾರೆ? ಅದನ್ನು ಚರ್ಚೆ ಮಾಡಿ, ಒಂದು ಸ್ಪಷ್ಟವಾದ ನಿರ್ಧಾರಕ್ಕೆ ನಾವು ಬರುತ್ತೇವೆ. ಮತ್ತೆ ಮಾನ್ಯ ಗೃಹ ಸಚಿವರು ಅವರೇ ಇನ್‌ಚಾರ್ಜ್ ಇರುವುದರಿಂದ ಇದೆಲ್ಲವನ್ನೂ ಅವರು ನೋಡಿಕೊಳ್ಳುತ್ತಿರುವುದರಿಂದ ಅವರೂ ಸಹ ಉತ್ತರ ಕೊಡುತ್ತಾರೆ. ನಂತರ ಏನೇನೂ ಮಾಡುವುದಕ್ಕೆ ಸಾಧ್ಯ ಇದೆ, ಖಂಡಿತ ನಾನು ಈ ಮನೆಯಲ್ಲಿ ಸ್ಪಷ್ಟವಾಗಿ ಭರವಸೆ ಕೊಡುತ್ತೇನೆ. ಇದಕ್ಕೆ ಪರಿಹಾರ ಹುಡುಕುವ ಕಡೆ ವಿಶೇಷ ಗಮನ ಮತ್ತು ಬೇಕಾದ ಹಣವನ್ನು ಬಿಡುಗಡೆ ಮಾಡುವ ಕಡೆಗೆ ಗಮನವನ್ನು ಕೊಡುತ್ತೇವೆ.

ಶ್ರೀ ಬಸವರಾಜ ರಾಯ ರೆಡ್ಡಿ:– ಅಧ್ಯಕ್ಷರೆ, ಎಷ್ಟು ಹಣವನ್ನು ಬಿಡುಗಡೆ ಮಾಡುತ್ತಾರೆ ಎನ್ನುವುದನ್ನು ಹೇಳಬೇಕಾಗುತ್ತದಲ್ಲ.

ಒಬ್ಬ ಮಾನ್ಯ ಸದಸ್ಯರು:– ಸರ್ಕಾರ ನಿಷೇಧ ಮಾಡಿದೆ.

ಶ್ರೀ ಬಸವರಾಜ ರಾಯ ರೆಡ್ಡಿ:– ಹಣ ಬಿಡುಗಡೆ ಮಾಡುವುದು ಹೇಳದಿದ್ದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್:– ಈಗ 12 ಜನ ಸತ್ತಿದ್ದಾರೆ. ಅವರ ಬಗ್ಗೆ ಏನು? ಪರಿಹಾರ ಏನು? ತಕ್ಷಣ...

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರು ನಂತಿದ್ದಾರೆ. ಅವರು ನಿಂತಾಗ ನೀವು oblige ಮಾಡಬೇಕಲ್ಲ.

ಶ್ರೀ ಎನ್.ಧರ್ಮಸಿಂಗ್:– ಅಧ್ಯಕ್ಷರೆ, ಇವತ್ತು ಆ ಭಾಗದಲ್ಲಿ ಆಗತಕ್ಕಂಥ ಮಳೆಯಿಂದ ಏನು ಅನಾಹುತ ಆಗುತ್ತದೆ? ಬಹಳಷ್ಟು ಜನರಿಗೆ ಮಾತನಾಡಲು ತಾವು ಅವಕಾಶ ಕೊಟ್ಟಿದ್ದೀರಿ, ಧನ್ಯವಾದಗಳು. ತಮ್ಮ ತಮ್ಮ ಕ್ಷೇತ್ರಗಳಲ್ಲಿನ ಸಮಸ್ಯೆಗಳನ್ನು ಅವರುಗಳು ಹೇಳಿದ್ದಾರೆ. ಅವರು ನಿನ್ನೆ ಕೂಡ ಗುಲ್ಬರ್ಗಾ, ಬೀದರ್ ಜಿಲ್ಲೆಗೆ ಹೋಗಿ ಬಂದಿದ್ದಾರೆ. ನಮ್ಮಲ್ಲಿ ಕೂಡ ಮಳೆ ಅನಾಹುತದಿಂದ ಎಷ್ಟೋ ಸೇತುವೆಗಳು ಬಿದ್ದಿವೆ, ಎಲ್ಲಾ ಕಡೆ ಈ ರೀತಿ ಆಗುತ್ತಿದೆ. ಮತ್ತು ಅವರ ಪಕ್ಷದ ಶಾಸಕರು ಕೂಡ ಹೇಳಿರಬಹುದು. ಅದು ಒಂದು ಇರಲಿ. ಕೇಂದ್ರಕ್ಕೆ ನಿಯೋಗ ಹೋಗತಕ್ಕದ್ದು ಅಷ್ಟೇನೂ ಬೇಕಾಗಿಲ್ಲ. ನೀವು ಹೋಗಿ. ನಾವು ಮೊದಲೂ ಕೂಡ ಹೇಳಿದ್ದೇವೆ. ನಾವು ಸಹಕಾರ ಮಾಡುತ್ತೇವೆ. ಆದರೆ ದಿನ ನಿತ್ಯಕ್ಕೆ ಆಗತಕ್ಕ ತೊಂದರೆಗೆ ತಾವು ಅದನ್ನು ತಡೆಗಟ್ಟತಕ್ಕ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡಬೇಕಲ್ಲ. You have to direct the Deputy Commissioner ಅವರಿಗೆ ಹೇಳಬೇಕು. ಎಲ್ಲೆಲ್ಲಿ ಇಂತಹ ಅನಾಹುತಗಳು ಆಗುತ್ತವೆ? ನೀರು ಬರುತ್ತದೆ. ತಡೆಗಟ್ಟತಕ್ಕಂತಹ ರೀತಿಯಲ್ಲಿ Standing Instructions ಇವತ್ತು ಕೊಡಬೇಕಾಗುತ್ತದೆ. That is the administration. ಅದಕ್ಕೆ ತಾವು ಹಣಕಾಸಿನ ಸಚಿವರಾಗಿ ಇದ್ದೀರಿ. ಇವತ್ತು ಶಾಸಕರು ಎಲ್ಲೆಲ್ಲಿ ಅನಾಹುತ ಆಗಿದೆ, ತೊಂದರೆ ಆಗಿದೆ ಎನ್ನತಕ್ಕ ಮಾತನ್ನು ವ್ಯಕ್ತ ಪಡಿಸಿದ್ದಾರೆ. ಹಣ ಬಿಡುಗಡೆ ಮಾಡಿರಿ. ಮತ್ತು ನಮ್ಮ ಭಾಗದಲ್ಲಿ ಕೂಡ ಆಗಿದೆ. ಆದರೆ ತಾವು ಇಲ್ಲಿಯವರೆಗೆ ಶ್ರೀ ಬಿ.ಆರ್.ಪಾಟೀಲ್ ಅವರನ್ನು ಕೇಳಿ, ಎಂ.ಐ. ಪಾಟೀಲ್ ಅವರನ್ನು ಕೇಳಿ. ಪಕ್ಷ ಭೇದ ಮರೆತು ಕೇಳುತ್ತಿದ್ದಾರೆ. ನಿಮ್ಮ ಪಕ್ಷದ ಶಾಸಕರು ಕೂಡ ಹೇಳಿದರು. ಮೊನ್ನೆ ತಾವು ಸೇಡಂನಿಂದ ಗುಲ್ಬರ್ಗಾಕ್ಕೆ ಹೋಗಿದ್ದೀರಿ, ಬೀದರ್‌ಗೆ ಹೋಗಿದ್ದೀರಿ, ಭಾಲ್ಕಿಗೆ ಹೋಗಿದ್ದೀರಿ. ಆ ಭಾಗದಲ್ಲಿ ಆಗತಕ್ಕದ್ದು ಅಲ್ಲಿ ಕೂಡ ಲಕ್ಷ್ಯ ಕೊಡಿ. ಎಲ್ಲಾ ಕಡೆ ಹಣ ಬಿಡುಗಡೆ ಆಗಬೇಕು. You have to create a confidence. ಹಣ ಬಿಡುಗಡೆ ಮಾಡಬೇಕು. ಮಾಡಿ, ಎಲ್ಲಿ ತಮಗೆ ಹೆಚ್ಚಿನ ರೀತಿಯಲ್ಲಿ ಸಹಕಾರ ಬೇಕಾದರೆ ಕೇಂದ್ರಕ್ಕೆ ನಿಯೋಗ ಹೋಗಬೇಕಾದರೆ ನಾವು ಸಹಕಾರ ಕೊಡುತ್ತೇವೆ. ಆದರೆ ಈಗ ದುಡ್ಡು ಬಿಡುಗಡೆ ಮಾಡಿ ಅಷ್ಟೇ.

ಶ್ರೀ ಬಸವರಾಜ ರಾಯ ರೆಡ್ಡಿ:– ಅಧ್ಯಕ್ಷರೆ, ಈ ಒಂದು ಅಕಾಲಿಕ ವಿಪರೀತ ಮಳೆಯಿಂದ ತಾವೇ ಒಪ್ಪಿಕೊಂಡಿದ್ದೀರಿ ಜೀವ ಹಾನಿ ಆಗಿದೆ, ರಸ್ತೆ ಸಂಪರ್ಕ ಕಡಿದು ಹೋಗಿದೆ. ಬೇರೆ ಬೇರೆ ಅನಾಹುತ ಆಗಿದ್ದನ್ನು ಒಪ್ಪಿಕೊಂಡಿದ್ದೀರಿ. ದಯಮಾಡಿ ತಾವು ಬೇಗನೇ ಹಣವನ್ನು ಬಿಡುಗಡೆ ಮಾಡಿರಿ. ಎಷ್ಟು ಹಣ ಬಿಡುಗಡೆ ಮಾಡುತ್ತೀರಿ? ಯಾವ್ಯಾವ ಜಿಲ್ಲೆಗೆ ಎಷ್ಟು ಹಣ ಬಿಡುಗಡೆ ಮಾಡುತ್ತೀರಿ ಎಂದು ಅದನ್ನು ಹೇಳಬೇಕೇ ಹೊರತು ಕೇಂದ್ರ ಸರ್ಕಾರದಿಂದ ಏನೇನು ಸಹಾಯ ಬರುತ್ತದೆ? ಆ ಬಗ್ಗೆ ಆಮೇಲೆ ವಿವರಣೆ ಕೊಡಿ. ಮೊದಲು ತಾವು ಹಣ ಬಿಡುಗಡೆ ಮಾಡಿ. ಮೊದಲು ಅವರು ಹಣ ಬಿಡುಗಡೆ ಮಾಡಲಿ ಎಂದು ಹೇಳಿದೆ. ಯಾವ ಯಾವ ಜಿಲ್ಲೆಗೆ ಎಷ್ಟು ಹಣ ಬಿಡುಗಡೆ ಮಾಡುತ್ತಾರೆ ಎಂದು ಮೊದಲು ಅದನ್ನು ಸ್ಪಷ್ಟಪಡಿಸಬೇಕು. ಈಗ ಜನ ಸತ್ತಿದ್ದಾರೆ. ಆ ಜನಕ್ಕೆ ಪರಿಹಾರ ಕೊಡುವುದು ಬೇಡವಾ? ಅವರು ಎಷ್ಟು ಹಣ ಕೊಡುತ್ತಾರೆಂದು ಸ್ಪಷ್ಟಪಡಿಸಲಿ.

ಅಧ್ಯಕ್ಷರು:– ಮಾಡುತ್ತಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಸಾರ್ ಈಗ ರಸ್ತೆ ಎಲ್ಲಿದೆ ಗೊತ್ತಾಗುತ್ತಿಲ್ಲ. ಗುಂಡಿ ಎಲ್ಲಿದೆ ಗೊತ್ತಾಗುತ್ತಿಲ್ಲ. ಇದು ವಾಸ್ತವ. ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗೆ ನೀವು ಹೋದರೆ ಆ ರೋಡ್ ನಲ್ಲಿ ಮೂವ್ ಮಾಡುವುದಕ್ಕೆ ಆಗುವುದಿಲ್ಲ. ಪಾಪ ಮೊನ್ನೆ ಕೃಷ್ಣಮೂರ್ತಿಯವರ ಸಂಬಂಧಿಕರು ನಿನ್ನೆ ಹೋಗಿ ಕಾರು ತಗುಲಿ ಹಾಕಿಕೊಂಡಿದ್ದು ನೋಡಿ ನನಗೆ ಕಣ್ಣಲ್ಲಿ ನೀರು ಬಂತು. ಎಂ.ಎಲ್.ಎ ಅವರ ಫ್ಯಾಮಿಲಿ. ಏನೂ ಗೊತ್ತಾಗುತ್ತಿಲ್ಲ. ಮಾನ್ಯ ಯಡಿಯೂರಪ್ಪನವರೇ ನಿಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ರೋಡ್ ಎಲ್ಲಿದೆ, ನೀರು ಎಲ್ಲಿದೆ ಗೊತ್ತಾಗುತ್ತಿಲ್ಲ. ಮತ್ತೆ ವಿದ್ಯುಚ್ಛಕ್ತಿ complete ಸ್ಥಗಿತ ಆಗಿದೆ. ನೀವು ಈ ರೀತಿ ದುಡ್ಡು ಬಿಡುಗಡೆ ಮಾಡುತ್ತೇನೆ, ಸಮಾಲೋಚನೆ ಮಾಡುತ್ತೇನೆ ಎನ್ನುವ ಕಾಲ ಅಲ್ಲ. ತಕ್ಷಣ ನಿಮ್ಮ ಡಿ.ಸಿ.ಗಳಿಗೆ ಅಲಾಟ್ ಮಾಡಿ. ಸಾರ್ ಇಷ್ಟಿಷ್ಟು ಉದ್ದ ಗುಂಡಿ ಬಿದ್ದಿದೆ. National High-way ಇವತ್ತು wash out ಆಗಿದೆ ತರೀಕೆರೆ–ಕಡೂರು ಮಧ್ಯೆ. ಯಾರೂ ಹೋಗುವುದಕ್ಕೆ ಆಗುತ್ತಿಲ್ಲ. ಏನಾದರೂ ತುರ್ತಾಗಿ ಮೊದಲು ಕ್ರಮ ಜರುಗಿಸಬೇಕು. ಡಿ.ಸಿ.ಗಳಿಗೆ ಹೇಳಿ. ನೀವು PWD ಅವರಿಗೆ, KEB ಅವರಿಗೆ ಆಕ್ಷನ್ ತೆಗೆದುಕೊಳ್ಳಲು ಹೇಳಿ. ನೀವು ದುಡ್ಡು ಆಮೇಲೆ ಕೊಟ್ಟರೆ ಆಗುತ್ತದೆ.

ಶ್ರೀ ಸಿ.ಟಿ. ರವಿ:– ಆ ತುರ್ತು ಸಂದರ್ಭಗಳಲ್ಲಿ ಡಿ.ಸಿ.ಗಳು ಎಲ್ಲಿರುತ್ತಾರೆ ಕೇಳಿ?

ಅಧ್ಯಕ್ಷರು:– ಮಾತನಾಡಲಿ ಇರಿ.

ಶ್ರೀ ಸಿ.ಟಿ.ರವಿ:– ನಮ್ಮ ಡಿ.ಸಿ. ಅವರು ಫೋನ್ ನಲ್ಲೂ ಸಿಗುವುದಿಲ್ಲ, ಮನೆಯಲ್ಲೂ ಇಲ್ಲ.

ಅಧ್ಯಕ್ಷರು:– ಈಗ ಎಲ್ಲಾ ಮಾತನಾಡಿದ್ದೀರಲ್ಲ, ಮತ್ತೆ ಏಕೆ? ಎಲ್ಲಾ ವಿಚಾರಗಳನ್ನು ಹೇಳಿದ್ದೀರಿ. ಸರ್ಕಾರಕ್ಕೆ ಏನು ಹೇಳಬೇಕೋ ಹೇಳಿದ್ದೀರಿ, ಕುಳಿತುಕೊಳ್ಳಿ.

ಶ್ರೀ ಗೋಪಾಲ ಕೃಷ್ಣ ಬೆಳ್ಳೂರು:– ಮಂತ್ರಿಗಳೆಲ್ಲಾ train ನಲ್ಲಿ ಹೋಗುತ್ತಾರೆ ಅಧ್ಯಕ್ಷರೆ, ಅವರು ರೋಡ್ ನಲ್ಲಿ ಹೋಗುವುದಿಲ್ಲ. ಮಂತ್ರಿಗಳೆಲ್ಲಾ helicopter, train ನಲ್ಲಿ ಹೋಗುತ್ತಾರೆ. ನಾವು ರೋಡ್ ನಲ್ಲಿ ಬರುವುದು ಗೊತ್ತಾಗುತ್ತದೆ. ಅದನ್ನು ವಿಚಾರ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್:– ಹಣ ಬಿಡುಗಡೆ ಮಾಡುತ್ತೇವೆಂದರು, ಸಂತೋಷ. ಈಗ ತಕ್ಷಣಕ್ಕೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ? ನೀವು ಸರ್ಕಾರದವರು ಏರಿಯಲ್ ಸರ್ವೆ ಏನಾದರೂ ಮಾಡಿದ್ದೀರಾ? ಎಷ್ಟು ಹಳ್ಳಿಗಳು ಮುಳುಗಿವೆ? ಏನು ಪರಿಸ್ಥಿತಿ? ಅವರಿಗೆ ಆಹಾರಗಳನ್ನು ಏನು ಕೊಟ್ಟಿದ್ದೀರಿ? ಸತ್ತವರಿಗೆ ಪರಿಹಾರ ಏನು ಕೊಟ್ಟಿದ್ದೀರಿ? ಜಿಲ್ಲಾಧಿಕಾರಿಗಳಿಗೆ ಹೇಳಿದ್ದೀರಿ. ನಿಮ್ಮ ಪ್ರಕಾರ ಧಾರವಾಡ–5, ಉಡುಪಿ–3, ಶಿವಮೊಗ್ಗ–2, ಈ ತರಹ ಒಟ್ಟು 12 ಜನ ಸತ್ತಿದ್ದಾರೆ.

ಅಧ್ಯಕ್ಷರು:– ಏರಿಯಲ್ ಸರ್ವೆ ಮಾಡುವುದಕ್ಕೆ ಸದನ ಇದೆಯಲ್ಲಾ?

ಶ್ರೀ ವಾಟಾಳ್ ನಾಗರಾಜ್:– ಆದ್ದರಿಂದ ನಾನೇನು ಹೇಳುತ್ತೇನೆ ಎಂದರೆ ಈ ಬಗ್ಗೆ ಸರ್ಕಾರ ತಕ್ಷಣಕ್ಕೆ ನೀವೇನು ಹಣ ಬಿಡುಗಡೆ ಮಾಡಿದ್ದೀರಿ?

ಅಧ್ಯಕ್ಷರು:– Immediate ಆಗಿ ನಿಮ್ಮ ಖಜಾನೆಯಿಂದ ಹಣ ಬಿಡುಗಡೆ ಮಾಡಬೇಕೆಂದು ಎಲ್ಲರ ಒತ್ತಾಯ. ಆ ಖಜಾನೆಯ ಕೀ ತೆಗೆಯಿರಿ.

ಶ್ರೀ ಅರಗ ಜ್ಞಾನೇಂದ್ರ:– ರಕ್ಷಣೆಗೆ ಕೂಡ ಬರಬೇಕು ಸಾರ್. ನಿನ್ನೆಗಿಂತ ಇವತ್ತು ಜಾಸ್ತಿ ಮಳೆ ಸುರಿಯುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೇ, ಮೂರು ವಾರದ ಹಿಂದೆ 50 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಇದು ಮೊದಲನೆಯದು. ಎರಡನೆಯದು, ಅಲ್ಲಿ ಸಾವಾದಂತಹವರಿಗೆ ತತ್‌ಕ್ಷಣಕ್ಕೆ ಪರಿಹಾರ ಕೊಡಲಿಕ್ಕೆ, ಗಂಜಿ ಕೇಂದ್ರಗಳನ್ನು ತೆರೆಯಲಿಕ್ಕೆ ಯಾವುದೇ ಹಣಕಾಸಿನ ತೊಂದರೆ ಇಲ್ಲ. ಅಗತ್ಯ ಇರುವ ಕಡೆ ಜಿಲ್ಲಾಧಿಕಾರಿಗಳ ಜೊತೆ ದೂರವಾಣಿ ಮೂಲಕ ಸಂಪರ್ಕ ಮಾಡಿ, ಹಣ ಇಲ್ಲದೇ ಇರುವಂತಹ ಕಡೆಗೆ ನಾವು ಹಣ ಬಿಡುಗಡೆ ಮಾಡುವುದಕ್ಕೂ ಸಿದ್ಧ ಇದ್ದೇವೆ. ಆದರೆ ಎಲ್ಲಿ ವಿದ್ಯುತ್ ಅಭಾವ ಇದೆ? ಅಡಿಕೆಗೆ ಕೊಳೆ ರೋಗ ಬಂದಿದೆ? ಬಿತ್ತನೆ ಮಾಡಿದಂತಹ ಬೆಳೆ ನಾಶ ಆಗಿದೆ? ಇದಕ್ಕೆ ಕೇಂದ್ರದ ನೆರವೂ ನಮಗೆ ಅಗತ್ಯ ಇದೆ. ಆ ರೀತಿಯ ನೆರವು ಕೇಳುತ್ತೇವೆಯೇ ಹೊರತು immediate ಗೆ ಏನು ಅಗತ್ಯ ಇದೆ? ಆ ಸಾವಾದವರಿಗೆ ಪರಿಹಾರ ಕೊಡುವುದಕ್ಕೆ ಮತ್ತು ಬೇರೆ ಬೇರೆ ತುರ್ತು ಕ್ರಮ ತೆಗೆದುಕೊಳ್ಳುವುದಕ್ಕೆ ಹಣಕಾಸಿನ ಯಾವುದೇ ತೊಂದರೆ ಇಲ್ಲ. ನಮ್ಮ ಮಾನ್ಯ ಗೃಹ ಸಚಿವರು ತತ್‌ಕ್ಷಣ ಎಲ್ಲರನ್ನೂ ಸಂಪರ್ಕ ಮಾಡಿ, ಮಾತನಾಡಿ, ಪರಿಹಾರವನ್ನು ಹುಡುಕುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ:– ಸಾರ್, ಇವತ್ತೊಂದು ವೈಮಾನಿಕ ಸರ್ವೆ ಮಾಡಿ. ಇಡೀ ಮಲೆನಾಡಿನಲ್ಲಿ ತಾವು ಪ್ರವಾಸ ಮಾಡಬೇಕು.

ಅಧ್ಯಕ್ಷರು:– ಈಗ ಏನಾಗಿದೆ, ಗಂಜಿ ಕೇಂದ್ರಗಳನ್ನು ತೆರೆಯುವುದು, ತುರ್ತು ಕ್ರಮದ ಬಗ್ಗೆ ಹೇಳಿದ್ದಾರೆ. ಆಮೇಲೆ ಸರಿಯಾದ ರೀತಿಯಲ್ಲಿ ವರದಿ ತರಿಸಿಕೊಂಡು ಅವರು ದುಡ್ಡು ಕೊಡಬೇಕಾಗುತ್ತದೆ. ಅವರು ಏನು ಹೇಳುತ್ತಾರೋ ಕೇಳೋಣ. ಅವರು ಹೇಳುತ್ತಾರೆ ತಡೆಯಿರಿ, No problem. ಗಂಜಿ ಕೇಂದ್ರ ತೆರೆಯುತ್ತೇವೆ. ಎಲ್ಲಾ immediate relief ಕೊಡುತ್ತೇವೆಂದು ಹೇಳಿದ ಮೇಲೆ ಮತ್ತೆ ಮತ್ತೆ ಏಕೆ ಚರ್ಚೆ ಮಾಡುತ್ತೀರಿ?

ಶ್ರೀ ಬಸವರಾಜ ರಾಯ ರೆಡ್ಡಿ:– ಹಣ ಬಿಡುಗಡೆ ಆಗಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಸನ್ಮಾನ್ಯ ಅಧ್ಯಕ್ಷರೆ, ಪ್ರಕೃತಿ ವಿಕೋಪ ನಿಧಿ ಮತ್ತು NCCF – ಪ್ರವಾಹ ಬಂದಂತಹ ಸಂದರ್ಭದಲ್ಲಿ, ಮಳೆ ಬಂದ ಸಂದರ್ಭದಲ್ಲಿ ಏನೇನು ಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ಸುತ್ತೋಲೆಗಳಿವೆ. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ನಿರ್ದೇಶನಗಳನ್ನು ಕಳುಹಿಸಿಕೊಟ್ಟಿದ್ದೇವೆ. ಎಲ್ಲೆಲ್ಲಿ ತತ್‌ಕ್ಷಣದಲ್ಲಿ ಕ್ರಮಗಳನ್ನು ಕೈಗೊಳ್ಳಬೇಕೋ, ಅಲ್ಲಿಗೆ ಕೂಡಲೇ ಪರಿಹಾರ ಕಳುಹಿಸಿಕೊಡಬೇಕು. ಸತ್ತವರಿಗೆ ಪರಿಹಾರ ಕೊಡುವುದಕ್ಕೆ ಈಗಾಗಲೇ ಒಂದು ಲಕ್ಷ ರೂಪಾಯಿ ಕೊಡುವುದಿದೆ. ಜಿಲ್ಲಾಧಿಕಾರಿಗಳ ಹತ್ತಿರವೇ ಹಣ ಇರುತ್ತದೆ. ಮಾನ್ಯ ಬಸವರಾಜ ರಾಯರೆಡ್ಡಿಯವರು ಏನು ಮಾಡುತ್ತಾರೆ? ದುಡ್ಡು ಏಕೆ ಬಿಡುಗಡೆ ಮಾಡಿಲ್ಲ? ದುಡ್ಡು ಇದೆ. ಯಾವುದೇ ಜಿಲ್ಲಾಧಿಕಾರಿಯೂ ದುಡ್ಡು ಇಲ್ಲದೇ ಇರಲು ಸಾಧ್ಯವಿಲ್ಲ. P.D. Account ಎನ್ನುವುದು ತಾವು ಸಚಿವರಾಗಿದ್ದಾಗ ನೋಡಿದ್ದೀರಿ. ಹಿಂದೆ ಪ್ರಕೃತಿ ವಿಕೋಪ ನಿಧಿ ಮತ್ತು ಬರಗಾಲದ ನಿಧಿ ಕೊಟ್ಟಿದ್ದೇವೆ. ಇಂತಹ ಆಕಸ್ಮಿಕವಾದ ಸಂದರ್ಭದಲ್ಲಿ ಬೇರೆ ಕಡೆ ಇರುವ ಹಣವನ್ನೂ ಇದರ ಕಡೆಗೆ ಡೈವರ್ಟ್ ಮಾಡಿ ಕೊಡಬೇಕೆಂಬ ಸುತ್ತೋಲೆ ಸಹ ಇದೆ. ಈಗ ಬಂದಿರುವ ಪ್ರಶ್ನೆಯೇನೆಂದರೆ, ಸತ್ತವರ ವರದಿ ಬಂದಿದೆ. ಅದಕ್ಕೆ ಹಣ ಕೊಡುತ್ತಾರೆ. ಆದರೆ, ಅಲ್ಲಿ ಎಷ್ಟು ಹಾನಿಯಾಗಿದೆ ಎಂಬುದಕ್ಕೆ ಲೆಕ್ಕಾಚಾರ ಮಾಡಬೇಕಾಗಿದೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ವರದಿ ತಯಾರಿಸುವುದಕ್ಕೆ ಸಮಯ ಬೇಕಾಗುತ್ತದೆಂದರು. ಅದಕ್ಕೆ ನಾವು ಸಹಕಾರ ಕೊಡುತ್ತೇವೆಂದು ಪ್ರತಿ ಪಕ್ಷದ ನಾಯಕರೂ ಹೇಳಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಗಳು ದೆಹಲಿಯಲ್ಲಿದ್ದಾರೆ. ಆದ್ದರಿಂದ, ಈಗ ಮುಖ್ಯ ಕಾರ್ಯದರ್ಶಿಗಳಿಂದ ಮತ್ತು ನನ್ನಿಂದ ಒಂದು ಫ್ಯಾಕ್ಸ್ ಕಳುಹಿಸಿಕೊಡುತ್ತೇವೆ. ಈಗ ಹೇಗೂ ತಾವು ಇದ್ದೀರಿ. ಇರತಕ್ಕಂಥ ಅಂಕಿ–ಸಂಖ್ಯೆ ಆಧಾರದ ಮೇಲೆ ಗೃಹ ಸಚಿವರೊಂದಿಗೆ ನೀವು ಹೇಗೂ ಸಮಾಲೋಚಿಸಿದ ಸಂದರ್ಭಗಳಲ್ಲಿ, ತತ್‌ಕ್ಷಣ ಮೊನ್ನೆ ಬಂದು ಹೋಗಿರುವುದರ ಜೊತೆಗೆ, ಮತ್ತೊಂದು ಸಲ ನೀವು ಪ್ರವಾಹ ಪೀಡಿತ ಪ್ರದೇಶಗಳು, ಮಳೆಯಿಂದ ತೊಂದರೆಗೀಡಾಗಿರುವ ಪ್ರದೇಶಗಳನ್ನು ವೀಕ್ಷಿಸುವುದಕ್ಕೆ ಒಂದು ಸಮಿತಿಯನ್ನು ಕಳುಹಿಸಿಕೊಡುವುದಕ್ಕೆ ತಿಳಿಸಿ ಎನ್ನುವ ಮಾತನ್ನು ಕಳುಹಿಸಿಕೊಡುತ್ತೇವೆ. ಇದರ ಜೊತೆಗೆ, ನೀವು ಹೇಳಿದಂತೆ, ವಿದ್ಯುಚ್ಛಕ್ತಿಯನ್ನು

ನಾವು ಈ ಕೂಡಲೇ ಸರಿಪಡಿಸುವುದು ಮುಖ್ಯ. ಅಲ್ಲಿ ಕಂಬಗಳು ಬಿದ್ದಿವೆ, ಟ್ರಾನ್ಸ್‌ಫಾರ್ಮರ್‌ಗಳು ಹಾಳಾಗಿವೆ ಮತ್ತು ಅರಣ್ಯ ಪ್ರದೇಶದಲ್ಲಿ ಬಂದಿರುವ ವೈರ್‌ಗಳು ಎಲ್ಲೆಲ್ಲಿ ಕಟ್ ಆಗಿವೆ, ಅವುಗಳ ಬಗ್ಗೆಯೂ ನಾವು ಲಕ್ಷ್ಯ ಕೊಡಬೇಕಾಗಿದೆ. ಅದೇ ರೀತಿ ಈಗ ಕೆಲವು ಕಂಟ್ರಾಕ್ಟರುಗಳಿಗೆ ಹಣ ಸಂದಾಯವಾಗಿಲ್ಲ. ಹಣ ಕೊಟ್ಟಿಲ್ಲವೆಂಬ ಕಾರಣಕ್ಕೆ ಅವರು ಸಹಕಾರ ಕೊಡುತ್ತಿಲ್ಲವೆಂಬ ಮಾತನ್ನು ಕೂಡ ಮಾನ್ಯ ಶಾಸಕರುಗಳು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಕ್ರಮ ಕೈಗೊಳ್ಳುವಂಥಾದ್ದು. ಮತ್ತು ಸಾಯಂಕಾಲವೇ ಈ ವಿಚಾರದಲ್ಲಿ ನಮಗೆ ಯಾರ್ಯಾರು ಲಭ್ಯವಿದ್ದಾರೋ, ಆ ಸಚಿವರುಗಳನ್ನು ಕರೆದು, ಮತ್ತು ಅಧಿಕಾರಿಗಳನ್ನು ಕರೆದು, ನಾವು ಒಂದು ಸಭೆ ಮಾಡುತ್ತೇವೆ. ಯುದ್ಧೋಪಾದಿ ನೀತಿಯಲ್ಲಿ ಅಲ್ಲಿ ಬಿದ್ದಿರುವ ಮನೆಗಳನ್ನು ಸ್ಥಳಾಂತರಿಸುವಂಥಾದ್ದು, ಅತಂತ್ರರಾಗಿರುವವರಿಗೆ ಗಂಜಿ ಕೇಂದ್ರಗಳನ್ನು ತೆರೆಯುವಂಥಾದ್ದು ಮಾಡುತ್ತೇವೆ. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ನಾವು ಏನೇ ಪರಿಹಾರ ಕೊಡುತ್ತೇವೆಂದರೂ, ಅದು ಹಿಟ್ಟಿನಲ್ಲಿ ಉಪ್ಪು ಬೆರೆಸಿದಂತೆ! ಪ್ರಕೃತಿ ಮುನಿದಾಗ ಆದಂತಹ ಅನಾಹುತಗಳೇನಿವೆ, ಅದಕ್ಕೆ ಸರಿಸಾಟಿಯಾದ ರೀತಿಯಲ್ಲಿ ನಾವೆಲ್ಲರೂ ಮಾಡಿಬಿಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಸಮಯ ಬೇಕಾಗುತ್ತದೆ. ಈಗಾಗಲೇ ಹೇಳಿದಂತೆ, ರಸ್ತೆಯಲ್ಲಿ ಹೋಗುವುದೇ ಕಷ್ಟವಾದಾಗ ಪರಿಹಾರದ ವಾಹನಗಳನ್ನು ತೆಗೆದುಕೊಂಡು ಹೋಗುವುದಕ್ಕೂ ಕಷ್ಟವಿರುತ್ತದೆ. ಇವೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು ಇವತ್ತು ಸದನದ ಸದಸ್ಯರುಗಳು ಯಾರ್ಯಾರು ಹೇಳಿದ್ದಾರೆ, ಪರಿಹಾರ ಕೊಡುವ ವಿಚಾರದಲ್ಲಾಗಲಿ, ಬೆಳೆ ನಾಶವಾಗಿರುವ ಸಂದರ್ಭಗಳಲ್ಲಾಗಲಿ, ಮನೆ ಬಿದ್ದಿರುವದಕ್ಕೆ ಈಗಾಗಲೇ 20,000 ರೂಪಾಯಿಗಳನ್ನು ಕೊಡಬೇಕೆಂದು ಇದೆ. ಮೊದಲು ಕೇವಲ 10,000 ರೂಪಾಯಿಗಳಿತ್ತು. ಮನೆ ಪೂರ್ತಿ ಬಿದ್ದಿದ್ದರೆ, 20,000 ರೂಪಾಯಿಗಳನ್ನು ಕೊಡಬೇಕೆಂದು ಈಗಾಗಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಜಾನುವಾರುಗಳು ಏನೇನು ನಾಶವಾಗಿವೆ, ಜಾನುವಾರುಗಳಿಗೆ ಸಂಬಂಧಿಸಿದಂತೆ ಹಿಂದೆ ಇರಲಿಲ್ಲ. ಕೇಂದ್ರ ಸರ್ಕಾರ ಅದಕ್ಕೋಸ್ಕರವೇ ಇವತ್ತು ಮತ್ತೆ ಸೂಚನೆಗಳನ್ನು ಕೊಟ್ಟಿದೆ. ಅದಕ್ಕನುಗುಣವಾದ ರೀತಿಯಲ್ಲಿ ಪರಿಹಾರ ಕೊಡಬೇಕು. ಆದರೆ, ಅದಕ್ಕೆಲ್ಲಾ ಯಾದಿ ತಯಾರಿಸಬೇಕಾಗುತ್ತದೆ. ಅದಕ್ಕೆ

ಒಂದೆರಡು ದಿವಸಗಳು ವ್ಯತ್ಯಾಸಗಳಾಗುತ್ತವೆ. ಆದರೆ, ಮೊದಲನೇ ಪ್ರಾಶಸ್ತ್ಯ ಇವತ್ತು ವಿದ್ಯುಚ್ಛಕ್ತಿ ಸರಿಪಡಿಸುವಂಥಾದ್ದು. ಎರಡನೇ ಪ್ರಾಶಸ್ತ, ನಾವು ರಸ್ತೆಯನ್ನು ತತ್‌ಕ್ಷಣದಲ್ಲಿ ಮಾಡಿ ಸಾಗಾಣಿಕೆಗೆ ವ್ಯವಸ್ಥೆ ಮಾಡುವಂಥಾದ್ದು. ಇವೆಲ್ಲಕ್ಕಿಂತಲೂ ಮೊದಲನೇ ಪ್ರಾಶಸ್ತ್ಯ, ಗಂಜಿ ಕೇಂದ್ರಗಳನ್ನು ತೆರೆದು ಅಲ್ಲಿ ಅನುಕೂಲತೆಗಳನ್ನು ಕಲ್ಪಿಸಿಕೊಡುವಂಥಾದ್ದು. ಇದಾದ ನಂತರ, ಆಹಾರ ಧಾನ್ಯ ಅಥವಾ ಬೆಳೆ ನಾಶ ಅಥವಾ ಮನೆಗಳ ನಾಶ ಅಥವಾ ಜಾನುವಾರುಗಳು ನಾಶವಾಗಿರುವ ಕುರಿತು ಇವುಗಳ ಯಾದಿಯನ್ನು ಯುದ್ಧೋಪಾದಿಯ ನೀತಿಯಲ್ಲಿ ತಯಾರಿಸಬೇಕೆಂದು ಇವತ್ತು instructions ಕೊಡುತ್ತೇವೆ. ಪರಿಹಾರ ಕೊಡುತ್ತೇವೆ. ಸರ್ಕಾರ ಈ ವಿಚಾರದಲ್ಲಿ ಹಿಂದು-ಮುಂದು ಹೋಗತಕ್ಕಂಥ ಪ್ರಶ್ನೆಯಿಲ್ಲವೆಂದು ಸನ್ಮಾನ್ಯ ಸದಸ್ಯರೆಲ್ಲರಿಗೂ ಕೂಡ ನಾನು ಭರವಸೆ ಕೊಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ಒಂದೇ clarification ಕೇಳುತ್ತೇನೆ. ಈಗ ರಸ್ತೆಗಳು ಕಡಿದು ಹೋದಲ್ಲಿ, ಜಿಲ್ಲಾಧಿಕಾರಿಗಳು ಬಂದು inspection ಮಾಡುವ ಪರಿಸ್ಥಿತಿಯಿಲ್ಲ. ತಕ್ಷಣವೇ ನಾವು ಮಾಡಿಸಿರುವ ಕಾಮಗಾರಿಗೆ ಸಂಬಂಧಿಸಿದಂತೆ payment ಆದರೂ ಮಾಡಿಸಬೇಕು. ಏಕೆಂದರೆ, ನಾವು ಸ್ಥಳದಲ್ಲಿರುತ್ತೇವೆ. ಕೆಲವು ಕಡೆಗಳಲ್ಲಿ ಮಾಡಿದ್ದೇವೆ. ಜಿಲ್ಲಾಧಿಕಾರಿಗಳ ಆದೇಶವಿಲ್ಲದೇ ಮಾಡಬಾರದೆಂದು Engineers ಗೆ ಕೊಟ್ಟಿದ್ದಾರೆ. ಅದು ಆಗುವುದಿಲ್ಲ. ತಕ್ಷಣದಲ್ಲಿ ನಾವು ಕೆಲಸ ಮಾಡಿಸಬೇಕಾಗುತ್ತದೆ. ನಾವು Engineer ಕರೆದುಕೊಂಡು ಹೋಗುತ್ತೇವೆ. Estimate ಮಾಡಿಸಿ, ಅವರಿಗೆ payment ಮಾಡಿಸಿವ ವ್ಯವಸ್ಥೆಯನ್ನು ತಾವು ಮಾಡಿಸಬೇಕು.

ಶ್ರೀ ಎಂ. ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಇಂತಹ ತುರ್ತು ಪರಿಸ್ಥಿತಿಯ ಸನ್ನಿವೇಶದಲ್ಲಿ ಒಬ್ಬ ಜಿಲ್ಲಾಧಿಕಾರಿ ಅಥವಾ ಒಬ್ಬ ಪ್ರಧಾನ ಕಾರ್ಯದರ್ಶಿ ಇರುವುದು ಅವರು ಯಾವುದೇ ಪ್ರಥಮ ದರ್ಜೆ ಗುಮಾಸ್ತರಂತೆ ಯೋಚನೆ ಮಾಡುವುದಕ್ಕಲ್ಲ. ನಿಯಮಾವಳಿ ರಚಿಸಿರುವುದು ಅದರ ದುರ್ಬಳಕೆಯಾಗಬಾರದು, ಭ್ರಷ್ಟಾಚಾರ ಆಗಬಾರದೆಂದು. ಆದರೆ, ತುರ್ತು ಪರಿಸ್ಥಿತಿಯ ಸನ್ನಿವೇಶ ಬಂದಾಗ ಇವೆಲ್ಲವನ್ನೂ ಬದಿಗೊತ್ತಿ ಆತ ನಿರ್ಣಯ ತೆಗೆದುಕೊಳ್ಳಲು ಅಧಿಕಾರವಿದೆ. ಆದ್ದರಿಂದ, ಆ ರೀತಿ ಏನಾದರೂ ಅಲಕ್ಷ್ಯ

ಮಾಡಿದಂಥ ಅಧಿಕಾರಿ ಯಾರಾದರೂ ಇದ್ದರೆ, ಹಾಗಾದರೆ, ನೀನು ಒಂದನೇ ದರ್ಜೆಯ ಗುಮಾಸ್ತನಾಗಿ ಹೋಗಪ್ಪ, ನಿನಗೆ ಬೇರೆ ವಿವೇಕಯುತವಾಗಿ, ವಿವೇಚನೆ ಉಪಯೋಗಿಸಿಕೊಳ್ಳುವ ಶಕ್ತಿ ನಿನಗೆ ಇರಬೇಕು, ತತ್‌ಕ್ಷಣದಲ್ಲಿ ರಸ್ತೆ ರಿಪೇರಿ ಮಾಡುವುದಕ್ಕೆ ದುಡ್ಡು ಕೊಡಬೇಕಾಗುತ್ತದೆ. ಇಂಜಿನಿಯರ್ ಬರಲಿಲ್ಲವೆಂದರೆ, ನಿಮ್ಮ ಸ್ಥಳೀಯ ಶಾಸಕರುಗಳನ್ನು ಅಥವಾ ಜನ ಪ್ರತಿನಿಧಿಗಳನ್ನು ಇಟ್ಟುಕೊಂಡು ಆ ಕೆಲಸ ಮಾಡಬೇಕಾಗುತ್ತದೆ. ಮೊದಲು ಮಾಡಬೇಕಾಗಿರುವುದು ಆದ್ಯತೆಯ ನಿಯಮಾವಳಿ ಪ್ರಕಾರ disaster management ವಿಚಾರಕ್ಕೆ ಸಂಬಂಧಿಸಿದಂತೆ ಅವರಿಗೆ ಬಹಳಷ್ಟು ತರಬೇತಿಯನ್ನೂ ಕೊಟ್ಟಿದ್ದೇವೆ. ಅಂತಹುದ್ದೇನಾದರೂ ಇದ್ದಲ್ಲಿ, ನಿಮ್ಮ ಜಿಲ್ಲಾಧಿಕಾರಿಗಳಿಗೆ ಆ ಸೂಚನೆಯನ್ನು ಈ ದಿವಸವೇ ಕಳುಹಿಸಿಕೊಡುತ್ತೇವೆ.

(3) ವಿಷಯ: ಬಂದೀಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಬಿ.ಎಸ್.ಅಬ್ಬಾಯಿಯವರ ಆತ್ಮಹತ್ಯೆ ಕುರಿತು.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈಗ ಸದನದಲ್ಲಿ ಗೃಹ ಸಚಿವರಿದ್ದಾರೆ. ಬಂದೀಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಬಿ.ಎಸ್.ಅಬ್ಬಾಯಿಯವರು ಆತ್ಮಹತ್ಯೆ ಮಾಡಿಕೊಂಡಿರುವುದು ಪತ್ರಿಕೆಯಲ್ಲಿ ಬಂದಿದೆ. ಅವರ ಸ್ವಂತ ಊರಾದ ಬೆಳಗಾಂನಲ್ಲಿ ಮೃತರ ಅಂತ್ಯಕ್ರಿಯೆ ಜರುಗಿದೆ. ಅವರು ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಒಂದು ಪತ್ರವನ್ನು ಬರೆದಿದ್ದಾರೆ. ಅವರ ಮನೆಯವರು ಹೇಳಿರುವ ಪ್ರಕಾರ, ನಾವು ಎಂ.ಪಿ.ಪ್ರಕಾಶ್‌ರವರಿಗೂ ಇದರ ಬಗ್ಗೆ ಹೇಳಿದ್ದೇವೆಂದು ಹೇಳಿದ್ದಾರೆ. ನಾನು ಕೂಡ ಗೃಹ ಸಚಿವನಾಗಿ ಕೆಲಸ ಮಾಡಿದ್ದೇನೆ. ಅವರು ಬಂದೀಖಾನೆಯಲ್ಲಿದ್ದರು. ನಾನು ಮುಖ್ಯಮಂತ್ರಿಯಾಗಿದ್ದಾಗಲೂ 26ನೇ ಜನವರಿಗೆ ಮತ್ತು 15ನೇ ಆಗಸ್ಟ್‌ಗೆ ಬಂದೀಖಾನೆಗೆ ಹೋಗಿ ಕೈದಿಗಳನ್ನು ಭೇಟಿಯಾಗುವ ಸಂದರ್ಭದಲ್ಲಿ ಅವರನ್ನು ನೋಡಿದ್ದೇನೆ. ನಾನು ಇಲ್ಲಿ ನಿಂತಿದ್ದು ಏಕೆಂದರೆ, ಪ್ರಕಾಶ್‌ರವರೆ, ನೀವು ಅದನ್ನು ಕೇಳುವುದೇ ಬೇಕಿಲ್ಲ. ನೀವೇ ಹೇಳಬಹುದು. ಇವತ್ತು ಈ ತರಹದ ಒಬ್ಬ ಡಿ.ಐ.ಜಿ. ಬಂದೀಖಾನೆಯಲ್ಲಿ ಸುಮಾರು 26–27 ವರ್ಷಗಳಷ್ಟು ಕಾಲ ಕೆಲಸ ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಪತ್ರ ಬರೆದಿದ್ದಾರೆ. ಇದಕ್ಕೂ ಮುನ್ನ ಗೃಹ